# ವ್ಯಕ್ತಿಚಿತ್ರ - ಸಂಸ

## ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಯಲ್ಲಿ ಈ ಉಪನ್ಯಾಸ ಗ್ರಂಥಮಾಲೆ ಅತ್ಯಂತ ಮುಖ್ಯವೂ ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು ಶಾಸ್ತ್ರಸಮ್ಮತವಾದ ಸರಣಿಯಲ್ಲಿ ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಭಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೬೨ ಪುಸ್ತಿಕೆಗಳು ಪ್ರಕಟವಾಗಿದೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನು ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ಸರ್ವತೋಮುಖ ಪ್ರಗತಿಯೇ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

**ಡಾ.ಎ.ಎಮ್. ಪಠಾನ**
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

# ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಉತ್ತರಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅವರ್ಸಾದಲ್ಲಿ ೪೧೩ ನೆಯ ಉಪನ್ಯಾಸ ಶಿಬಿರವನ್ನು ೧೯೯೫ನೇ ಇಸ್ವಿಯ ಡಿಸೆಂಬರ್ ೧೫ ಮತ್ತು ೧೬ ರಂದು ಏರ್ಪಡಿಸಿತ್ತು. ಆ ಸಂದರ್ಭದಲ್ಲಿ ನಾನು 'ಸಂಸ'ರನ್ನು ಕುರಿತು ಮಾಡಿದ ಉಪನ್ಯಾಸವು ಇದೀಗ ಗ್ರಂಥರೂಪದಲ್ಲಿ ಹೊರಬರುತ್ತಲಿದೆ.

ಈ ಶತಮಾನದ ಆದಿಭಾಗದಲ್ಲಿದ್ದ 'ಸಂಸರು' ಅಪ್ರತಿಮ ನಾಟಕಕಾರರು. ಕನ್ನಡದಲ್ಲಿ ಐತಿಹಾಸಿಕ ವಸ್ತುವನ್ನು ನಾಟಕಕ್ಕೆ ಬಳಸಿಕೊಂಡವರಲ್ಲಿ ಅವರೇ ಮೊದಲಿಗರು. 'ಸಂಸ'ರ ನಿಜನಾಮಧೇಯ ಸಾಮಿ ವೆಂಕಟಾದ್ರಿ ಅಯ್ಯರ್ ಎಂದು. ಆದರೆ ಕನ್ನಡ ನಾಟಕ ಕ್ಷೇತ್ರದಲ್ಲಿ 'ಸಂಸ' ರೆಂದೇ ಖ್ಯಾತನಾಮರಾಗಿದ್ದಾರೆ. ಅವರು ರಚಿಸಿರುವರೆಂದು ಹೇಳಲಾಗುತ್ತಿರುವ ೨೩ ನಾಟಕಗಳಲ್ಲಿ ಆರು ಮಾತ್ರ ಈಗ ಉಪಲಬ್ಧವಿವೆ. ಸಂಸರ ಕಾವ್ಯ ಹಾಗೂ ಬರಹ ತದ್ವಿರುದ್ಧವಾದವು. ಆದರೆ ಎರಡೂ ಅಷ್ಟೇ ಕುತೂಹಲವನ್ನು ಹುಟ್ಟಿಸುವಂಥವು. ಸಾಹಿತಿಯ ಬದುಕು ಹಾಗೂ ಬರಹಗಳಿಗಿರುವ ಸಂಬಂಧಗಳ ಬಗ್ಗೆ ನಮ್ಮನ್ನು ಪುನರಾಲೋಚನೆಗೆ ತೊಡಗಿಸುವಂಥವು. ಐತಿಹಾಸಿಕ ದಾಖಲೆಗಳನ್ನು ಆಳವಾಗಿ ಅಧ್ಯಯನ ಮಾಡಿ ಸಂಸರು ನಾಟಕಗಳನ್ನು ರಚಿಸಿರುವುದರಿಂದ ಮೈಸೂರು ಅರಸರ ಕಾಲದ ಸಾಂಸ್ಕೃತಿಕ ಜೀವನವನ್ನು ಅರಿಯಲು ಅವು ಬಹಳಷ್ಟು ಸಹಾಯಕಾರಿಯಾಗುತ್ತವೆ. ನಾಟಕಗಳು ತಮ್ಮ ವಸ್ತು, ಪಾತ್ರ, ಸನ್ನಿವೇಶ ರಚನೆ ಮತ್ತು ಅದ್ಭುತ ನಾಟಕೀಯ ಗುಣಗಳಿಂದ ಇಂದಿಗೂ ನಮ್ಮನ್ನು ಆಕರ್ಷಿಸುತ್ತಲಿವೆ.

ಹೀಗೆ ಕನ್ನಡ ನಾಟಕ ಕ್ಷೇತ್ರದ ಮಹತ್ವದ, ಆದರೆ ಅನೇಕರು ಅರಿಯದ-ನಾಟಕಕಾರನೊಬ್ಬನ ಜೀವನವನ್ನು ಹಾಗೂ ಆತನ ಕೃತಿಗಳನ್ನು ಪರಿಚಯಿಸುವ ಅವಕಾಶವನ್ನು ಪ್ರಸಾರಾಂಗದ ನಿರ್ದೇಶಕರಾದ ಪ್ರೊ.ಹಾ. ವೆಂ. ನಾಗೇಶ ಅವರು ನನಗೆ ನೀಡಿರುವುದಕ್ಕೆ ಹಾಗೂ ಅದನ್ನು ಸಂಸರ ಜನ್ಮಶತಮಾನೋತ್ಸವದ ವರ್ಷವೇ ಪುಸ್ತಕ ರೂಪದಲ್ಲಿ ಪ್ರಕಟಪಡಿಸಲು ಮುಂದೆ ಬಂದಿರುವುದಕ್ಕೆ ಅವರಿಗೂ ಹಾಗೂ ಈ ಪುಸ್ತಿಕೆಯನ್ನು ಅಂದವಾಗಿ ಮುದ್ರಿಸಿಕೊಟ್ಟ ಕ.ವಿ.ವಿ. ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳು.

ಸಂಸರನ್ನು ಕುರಿತು ನಾನು ನೀಡಿದ ಉಪನ್ಯಾಸವನ್ನು ತುಂಬ ಕುತೂಹಲಭರಿತರಾಗಿ, ಆಸಕ್ತಿಯಿಂದ ಕೇಳಿದ ಅವರ್ಸಾದ ಜನತೆಯನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅಲ್ಲಿ ಎಲ್ಲ ರೀತಿಯ ಅನುಕೂಲತೆಗಳನ್ನು ಒದಗಿಸಿಕೊಟ್ಟ ಡಾ. ಶ್ರೀಪಾದ ಶೆಟ್ಟಿಯವರಿಗೂ ಅವರ್ಸಾದ ಶ್ರೀ ಕಾತ್ಯಾಯನಿ ಹೈಸ್ಕೂಲಿನ ಮುಖ್ಯಾಧ್ಯಾಪಕರಾದ ಶ್ರೀ ಎಂ.ಎಸ್. ಪ್ರಭು ಅವರಿಗೂ ನನ್ನ ವಂದನೆಗಳು.

**ಡಾ. ಶಾಲಿನಿ ರಘುನಾಥ**
ಜಾನಪದ ಅಧ್ಯಯನ ವಿಭಾಗ
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಆಯ್ದ ಆಧಾರ ಗ್ರಂಥಗಳು

೧. ಪ್ರಸನ್ನ: **ನಾಟಕರಂಗ ಕೃತಿ,** ಅಕ್ಷರ ಪ್ರಕಾಶನ, ಹೆಗ್ಗೋಡು. ೧೯೮೫

೨. ಮರುಳಸಿದ್ದಪ್ಪ ಕೆ.: **ಆಧುನಿಕ ಕನ್ನಡ ನಾಟಕ,** ಬೆಂಗಳೂರು. ೧೯೯೩

೩. ವೈಕುಂಠರಾಜು ಬಿ.ವಿ. (ಸಂ): **ಸಂಸ ನಾಟಕಗಳು** ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು. ೧೯೮೮

೪. ಸುಬ್ರಹ್ಮಣ್ಯಂ ಅ.ನ.: **ಸಂಸ ಸ್ಮರಣೆ,** ಮೈಸೂರು. ೧೯೮೭

೫. **ಸಂಸ ಕವಿ:** ಕರ್ನಾಟಕ ಸಂಘ, ಬೆಂಗಳೂರು. ೧೯೫೬

## ೧. ಪೀಠಿಕೆ

ಕನ್ನಡ ನಾಟಕ ಸಾಹಿತ್ಯದ ಇತಿಹಾಸದಲ್ಲಿ ಗಮನಿಸಬೇಕಾದ ಹೆಸರು ಸಂಸರದ್ದು. ಇವರ ನಿಜವಾದ ಹೆಸರು ಸಾಮಿವೆಂಕಟಾದ್ರಿ ಅಯ್ಯರ್ ಎಂದು. ಎ.ಎನ್. ಸಾಮಿ, ಎ.ಎನ್. ವೆಂಕಟಾದ್ರಿ ಅಯ್ಯರ್ ಎಂದು. ಎ.ಎನ್. ಸಾಮಿ, ಎ.ಎನ್. ವೆಂಕಟಾದ್ರಿ ಪಂಡಿತ, ಎ. ಎನ್. ಸಾಮಿ ವೆಂಕಟಾದ್ರಿ ಅಯ್ಯರ್, ಎ.ಎ. ಪಂಡಿತ ಮುಂತಾಗಿ ಅನೇಕ ಹೆಸರುಗಳಲ್ಲಿ ಕಾಣಿಸಿಕೊಂಡ ಇವರು 'ಸಂಸ' ರೆಂದು ಕನ್ನಡ ನಾಟಕ ಕ್ಷೇತ್ರದಲ್ಲಿ ಪ್ರಸಿದ್ಧರಾದದ್ದು 'ವಿಗಡವಿಕ್ರಮರಾಯ' ನಾಟಕದ ಮುದ್ರಣ ಸಂದರ್ಭದಿಂದ. ಈ ನಾಟ ಕ ಮೊದಲು ಪ್ರಬುದ್ಧ ಕರ್ಣಾಟಕದಲ್ಲಿ ಕೆಲವು ಕಂತುಗಳಾಗಿ ಪ್ರಕಟವಾಯಿತು. ಆ ಸಂದರ್ಭದಲ್ಲಿ ನಾಟಕದ ಕರ್ತೃವಿನ ಹೆಸರನ್ನು 'ಕಂಸ' ಎಂದು ಇಡಲಾಗಿತ್ತಂತೆ. ಮುದ್ರಾರಾಕ್ಷಸನ ಕೃಪೆಯಿಂದ ಅದು ಸಂಸ ಎಂಬ ಹೆಸರಿನಲ್ಲಿ ಅಚ್ಚಾಯಿತಂತೆ. ಮೊದಮೊದಲು ಈ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಾಮಿಯವರು ಮುಂದೆ ತಮ್ಮ ನಾಟಕಗಳಿಗೆಲ್ಲಾ ಕರ್ತೃವಾಗಿ ಆ ಹೆಸರನ್ನೇ ಉಳಿಸಿಕೊಂಡರು. ಅಂತೆಯೇ 'ಸಂಸ' ಎಂಬ ಹೆಸರೇ ಈಗ ಕನ್ನಡ ನಾಟಕ ಪ್ರಪಂಚದಲ್ಲಿ ಚಿರಸ್ಥಾಯಿಯಾಗಿ ಉಳಿದಿದೆ. ಆದರೆ ಸಂಸರು 'ವಿಗಡ ವಿಕ್ರಮರಾಯ'ದ ಕರ್ತೃವಾಗಿ ತಮ್ಮ ನಿಜನಾಮಧೇಯವನ್ನು ನೀಡದೇ ವಿಚಿತ್ರವೆನ್ನಿಸುವ ಕಂಸ ಎಂಬ ಹೆಸರನ್ನೇಕೆ ಇಟ್ಟರೋ ತಿಳಿಯದಾಗಿದೆ. ಕೈಲಾಸಂಜ ಒಡನಾಡಿಗಳಲ್ಲಿ ಸಂಸರು ಒಬ್ಬರು. ಕೈಲಾಸಂ ನಾಟಕವೊಂದರಲ್ಲಿ ಬರುವ 'ಕಂಸಧ್ವನಿ'ಯಿಂದ ಪ್ರೇರಿತರಾಗಿ ತಮ್ಮ ಹೆಸರನ್ನು 'ಕಂಸ' ಎಂದು ಪರಿವರ್ತನೆ ಮಾಡಿಕೊಂಡರೋ ಅಥವಾ ಭಾರತದ ದುಷ್ಟ ಚತುಷ್ಟಯರಲ್ಲಿ ಒಬ್ಬನಾದ ಕಂಸ ಅವರಿಗೆ ಪ್ರಿಯನೆನಿಸಿದನೋ ತಿಳಿಯದಾಗಿದೆ.

## ೨. ಬದುಕು

ಬ್ರಹ್ಮಶ್ರೀ ಅಗರದ ನರಸಿಂಹ ಪಂಡಿತರಿಗೆ ಮೂರು ಜನ ಗಂಡು ಮಕ್ಕಳು. ಹಾಗೂ ಒಬ್ಬ ಹೆಣ್ಣು ಮಗಳು. ಸಂಸರೇ ಗಂಡುಮಕ್ಕಳಲ್ಲಿ ಕೊನೆಯವರು. ಸುಪ್ರಸಿದ್ಧ ವಿದ್ವಾಂಸರಾಗಿದ್ದ ಡಾ.ಎ. ಎನ್‌ನರಸಿಂಹಯ್ಯನವರು ಅವರ ಹಿರಿಯಣ್ಣ. ಡಾ. ಎ.ಎನ್. ಗುಂಡಾ ಪಂಡಿತರೆನ್ನುವವರು ಮಧ್ಯದವರು. ತಂಗಿ ಸೀತಮ್ಮ ೧೯೧೦ರ ಸುಮಾರಿಗೆ ಮದುವೆಯಾಗಿ ಗಂಡನಮನೆ ಸೇರಿದ್ದಳು. ಅವಳಿಗೆ ಅಣ್ಣಸಂಸನೆಂದರೆ ಬಹಳ ಪ್ರೀತಿ. ಅಣ್ಣ ತಂಗಿಯರ ಮಧುರಬಾಂಧವ್ಯವನ್ನು ಸಂಸರು ಜೀವನದ ಬಹುಕಾಲ ಉಳಿಸಿಕೊಂಡು ಬಂದಿದ್ದರೆಂದು ತೋರುತ್ತದೆ. ಸಂಸರು ಹುಟ್ಟಿದ್ದು ಕೊಳ್ಳೇಗಾಲದ ಹತ್ತಿರದ ಅಗರದಲ್ಲಿ, ೧೮೯೮ನೇ ಇಸ್ವಿ ಜನವರಿ ೧೩ರಂದು. ನಾಲ್ಕು ವರ್ಷದವರರಿರುವಾಗಲೇ ತಾಯಿಯನ್ನು ೧೯೧೨ರಲ್ಲಿ ಅಂದರೆ ೧೪ ವರ್ಷದ ಹೊತ್ತಿಗೆ ತಂದೆಯನ್ನು ಕಳೆದುಕೊಂಡು ತಬ್ಬಲಿತನವನ್ನು

ಅನುಭವಿಸಿದವರು ಅವರು. ಚಿಕ್ಕಪ್ಪನೊಂದಿಗೆ ಸಹೋದರರೊಂದಿಗೆ ನಾನಾಕಾರಣಕ್ಕಾಗಿ ವಿರೋಧ ಕಟ್ಟಿಕೊಂಡು ನಂಟಿನ ಸುಖದಿಂದ ವಂಚಿತರಾದರು. ಬಂಧುಗಳಿಂದಲೂ ಅವರು ಆದಷ್ಟು ದೂರವೇ ಇರುತ್ತಿದ್ದರು.

## ೨.೧ ಬಾಲ್ಯ ಜೀವನ:

ಬಾಲ್ಯದ ವಿದ್ಯಾಭ್ಯಾಸವನ್ನು ಸಂಸರು ಕುನಗನಹಳ್ಳಿ ಎಲಿಮೆಂಟರಿ ಶಾಲೆಯಲ್ಲಿ ಹಾಗೂ ಕೊಳ್ಳೆಗಾಲದ ಬೋರ್ಡ ಮಿಡಲ್‌ಸ್ಕೂಲಿನಲ್ಲಿ ಮಾಡಿದರು. ಅಕ್ಷರಾಭ್ಯಾಸ ಪಾಳ್ಯದ ಶ್ರೀಕಂಠ ಶಾಸ್ತ್ರಿಗಳಿಂದ ಆಯಿತು. ಒಂದೆರಡನೆಯ ತರಗತಿಯಲ್ಲಿರುವಾಗಲೇ ಪೋಸ್ಟ್‌ಮಾಸ್ಟರ್ ಶ್ರೀನಿವಾಸ ಶಾಸ್ತ್ರಿಗಳು ಕನ್ನಡ, ಸಂಸ್ಕೃತ ಓದಲು ಕಲಿಸಿದರು. ಹೈಸ್ಕೂಲ್‌ವಿದ್ಯಾಭ್ಯಾಸಕ್ಕಾಗಿ ಮೈಸೂರಿನ ಮರಿಮಲ್ಲಪ್ಪ ಹೈಸ್ಕೂಲು ಸೇರಿದರು. ಎಸ್.ಎಸ್.ಎಲ್.ಸಿಯಲ್ಲಿ ಪಾಸಾಗದೇ ವಿದ್ಯೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಅವರಿಗೆ ಸಾಹಿತ್ಯ ರಚನೆಯ ಕಡೆಗೆ ಒಲವು ಮೂಡಿತ್ತು. ಅಷ್ಟರಲ್ಲೇ ಒಂದು ಕಾದಂಬರಿಯನ್ನೂ ಬರೆದಿದ್ದರು. ‘ಅರಗಿಳಿ’ ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಲು ಪ್ರಯತ್ನಿಸಿ ಸೋತಿದ್ದರು. ಜೊತೆಗೆ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದ ಕರಿಬಸವ ಶಾಸ್ತ್ರಿಗಳ ಸಹಾಯದಿಂದ ಹಳಗನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದರು. ಭಾಷೆ ಹಾಗೂ ಛಂದಸ್ಸಿನ ಮೇಲೆ ಪ್ರಭುತ್ವವನ್ನು ಸಂಪಾದಿಸಿಕೊಂಡರು. ಈ ಹಂತದಲ್ಲಿಯೇ ಅವರು ಆಂಗ್ಲ ಸಾಹಿತ್ಯವನ್ನೂ ಓದಿ ಹೆಚ್ಚಿನ ಜ್ಞಾನವನ್ನು ಪಡೆದರು. ಓದುವಿಕೆ ಮತ್ತು ಪರ್ಯಟನ ಇವುಗಳ ಮೂಲಕ ಪ್ರಪಂಚ ಜ್ಞಾನವನ್ನು ಗ್ರಹಿಸಿದರು.

ಸಂಸರ ನಾಟಕಗಳಂತೆ ಅವರ ವೈಯಕ್ತಿಕ ಜೀವನವೂ ಅಷ್ಟೇ ಕುತೂಹಲವನ್ನು ಕೆರಳಿಸುತ್ತದೆ. ಅವರ ಬದುಕು ಹಾಗೂ ಬರಹ ಒಂದಕ್ಕೊಂದು ವಿರುದ್ಧವಾದವುಗಳು. ಯಾರೋ ತನಗೆ ಕಿರುಕುಳ ಕೊಡುತ್ತಿದ್ದಾರೆಂಬ ಹುಚ್ಚುಭಯ (Persecution Complex) ಅವರನ್ನು ಏಕೆ ಕಾಡಲಾರಂಭಿಸಿತು ಎನ್ನುವದು ಅನೇಕರನ್ನು ಕಾಡಿದೆ. ತಮ್ಮನ್ನು ತಾವೇ ಮಾನಸಿಕವಾಗಿ ಹಿಂಸಿಸಿಕೊಂಡ ಸಂಸರ ಒಳತೋಟಿಯನ್ನು ಅರ್ಥ ಮಾಡಿಕೊಳ್ಳುವುದು ಸುಲಭದ್ದಲ್ಲ. ಅವರ ಅಸ್ತವ್ಯಸ್ತವಾದ ಜೀವನವೇ ಅಚ್ಚುಕಟ್ಟಾದ ಸಾಹಿತ್ಯ ರಚನೆಗೆ ಪರೋಕ್ಷವಾಗಿ ಪ್ರೇರಣೆಯನ್ನು ನೀಡಿದ್ದರೆ ಆಶ್ಚರ್ಯವಿಲ್ಲ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ಸಂಸರು ಚಿಕ್ಕಪ್ಪನ ಆಶ್ರಯದಲ್ಲಿ ಕೆಲಕಾಲ ಕಳೆಯಬೇಕಾಗಿ ಬಂತು. ವಿದ್ಯೆಯನ್ನು ಹೇಗಾದರೂ ಮುಂದುವರೆಸಬೇಕೆಂಬ ಆಸೆ ಸಂಸರದ್ದು. ಆದರೆ ವಿದ್ಯೆಗಾಗಿ ಹೆಚ್ಚು ಹಣನೀಡಲು ತಯಾರಿಲ್ಲದ ಚಿಕ್ಕಪ್ಪನೊಂದಿಗಿನ ಅವರ ಸಂಬಂಧ ಈ ಕಾರಣಕ್ಕಾಗಿಯೇ ಬಿಗಡಾಯಿಸುತ್ತ ಬಂದಿತು. ತಾಯಿ ತೀರಾ ಚಿಕ್ಕವರಿರುವಾಗಲೇ ತೀರಿಕೊಂಡಿದ್ದರೂ ದೊಡ್ಡ ಅತ್ತಿಗೆ ಶೇಷಮ್ಮ ಇವರನ್ನು ಪ್ರೀತಿಯಿಂದ ನೋಡಿಕೊಂಡಿದ್ದರು. ೧೯೧೮ ರಲ್ಲಿ ಅವರು ತೀರಿಕೊಂಡಗ, ಒಂದು ರೀತಿಯಲ್ಲಿ ಪರದೇಶಿ ಬದುಕು ಇವರದಾಯಿತು. ಅಣ್ಣ ತಮ್ಮಂದಿರಲ್ಲಿ ಆಸ್ತಿಗಾಗಿ ಕಾದಾಟ ಜಗಳಗಳೂ ಪ್ರಾರಂಭವಾದವು. ಪಿತೂರಿಗಳು ಹುಟ್ಟಿಕೊಂಡವು. ಅಣ್ಣಂದಿರೊಂದಿಗಿನ ಸಂಸರ ಸಂಬಂಧವು ಮಧುರವಾಗಿ ಉಳಿಯದಾಯಿತು. ಅವರೊಂದಿಗಿನ ಆ ಕಾಲದ ಪತ್ರವ್ಯವಹಾರ ಈ ಮಾತನ್ನು ಸ್ಪಷ್ಟಗೊಳಿಸುತ್ತದೆ. ‘Dear Brother! ನಿಂದ ಆರಂಭವಾಗುವ ಪತ್ರ ವ್ಯವಹಾರ, ಬದಲಾದ ಭಾವಗಳಿಗೆ ತಕ್ಕಂತೆ ಸರ್, ತಿ|| ಅಣ್ಣನವರಿಗೆ ನಮಸ್ಕಾರಗಳು ಎಂಬ ಗೌರವ ಭಕ್ತಿಗಳೊಂದಿಗಿನ, ಕೆಲವೊಮ್ಮೆ `Brother!’ ಎಂಬ ಕೋಪದಿಂದ, ಮತ್ತೆ ಕೆಲವೊಮ್ಮೆ ‘ಶ್ರೀಮಾನ್‌ಅಗರದ...... ಗೆ’ ಎಂಬ ಇನ್ನಷ್ಟು ಕೋಪದ ಅಭಿವ್ಯಕ್ತಿಯೊಂದಿಗೆ, ಮಗದೊಮ್ಮೆ ತುಂಬ ಕೋಪದಲ್ಲಿ ಹೆಸರೇ ಇಲ್ಲದೆ ವ್ಯವಹರಿಸಲ್ಪಡುತ್ತಿತ್ತು. ‘ಎಲವೋ ನರಾಧಮಾ!’ ಎಂಬ ಒಕ್ಕಣಿಕೆಯಿಂದ ಪ್ರಾರಂಭವಾದದ್ದೂ ಉಂಟು. `Has that sowcar been Kollegal?’ ಎಂದು ಒರಟಾಗಿ ಕೇಳಿದ್ದೂ ಉಂಟು. `I regret see my brothers fighting disgracefully’ ಎಂದು ೫. ೧೧. ೧೯೧೮ ರಂದು ಅವರು ಪತ್ರ ಬರೆದವರು, ಅಂದಿನಿಂದ ಉದ್ಯೋಗವನ್ನರಸುತ್ತ ಊರೂರು ಅಲೆಯತೊಡಗಿದರು.

## ೨.೨ ಉದ್ಯೋಗ:

ಸಂಸರು ೧೯೧೯ ರಿಂದ ೧೯೩೫ರ ವರೆಗೆ ಸುಮಾರು ೧೬ ವರ್ಷಗಳ ಅವಧಿಯಲ್ಲಿ ಮಧ್ಯೆ ಮಧ್ಯೆ ಐದಾರು ವರ್ಷ ನಿರುದ್ಯೋಗಿಯಾಗಿದ್ದನ್ನು ಬಿಟ್ಟರೆ, ಉಳಿದ ಕಾಲದಲ್ಲಿ ಹೊಟ್ಟೆಪಾಡಿಗಾಗಿ ವಿವಿಧ ಬಗೆಯ ಉದ್ಯೋಗ ಮಾಡಿದಂತೆ ತೋರುತ್ತದೆ. ಆದರೆ ಎಲ್ಲಿಯೂ ಒಂದು ವರ್ಷಕ್ಕಿಂತ ಹೆಚ್ಚು ನೆಲೆನಿಂತಂತೆ ತೋರುವುದಿಲ್ಲ. ೧೯೧೯ರಲ್ಲಿ ಹೆಬ್ಬಾಲ್‌ರೂರಲ್‌ಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಪ್ರಾರಂಭಿಸಿದರು. ಅಲ್ಲಿ ಇದ್ದದ್ದು ಕೇವಲ ಆರು ತಿಂಗಳು. ಅದನ್ನು ಬಿಟ್ಟವರು ಮುಂಬೈಗೆ ಹೋಗಿ ಬಿ.ಬಿ.ಸಿ.ಐ ನಲ್ಲಿ ರೇಲ್ವೆ ಗುಮಾಸ್ತರಾದರು. ಅಲ್ಲಿಯೂ ಅದು ಅವರಿಗೆ ಸರಿ ಅನ್ನಿಸದೆ, ಚಾಮರಾಜ ನಗರದ ನ್ಯಾಷನಲ್‌ಸ್ಕೂಲಿನಲ್ಲಿ ೧೯೨೦ ರಲ್ಲಿ ಉಪಾಧ್ಯಾಯರಾಗಿ ಸೇರಿದರು. ಐದು ತಿಂಗಳು ಕಳೆಯುತ್ತಲೇ ಪ್ಲೇಗ್‌ರೋಗಕ್ಕೆ ಬಲಿಯಾಗಿ ಕೆಲಸ ಮುದುವರೆಸುವುದು ಸಾಧ್ಯವಾಗಲಿಲ್ಲ. ತಮ್ ಆರೈಕೆ ಮಾಡಲು ದೊಡ್ಡತ್ತಿಗೆ ಶೇಷಮ್ಮನೂ ಇಲ್ಲದೇ ತಬ್ಬಲಿತನವನ್ನು ಅನುಭವಿಸುತ್ತೆ, ತಮ್ಮ ಬಾಳು ಕರ್ಣನ ತೆರದ್ದೆಂದು ಅನ್ನಿಸಿ, ಕಂದ ಪದ್ಯಗಳಲ್ಲಿ ಆತ್ಮ ಚರಿತ್ರೆ ಬರೆದರು. ಅದನ್ನು ಮೆಚ್ಚಿ ಮುದ್ರಿಸಿಬೇಕೆಂದಿದ್ದ ಪ್ರಬುದ್ಧ ಕರ್ಣಾಟಕದ ಸಂಪಾದಕ ಸ್ನೇಹಿತರಿಗೆ ಮರುದಿನ ಬರಲು ಹೇಳಿ, ಬಂದಾಗ ಬೂದಿಯ ಗುಡ್ಡೆಯನ್ನು ತೋರಿಸಿದರಂತೆ. ತಕ್ಷಣವೇ ನಿರಾಶೆಯಾಗಬಾರದೆಂದು ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರ ಬಗ್ಗೆ ಒಂದು ಸ್ತೋತ್ರ ಮಾಲಿಕೆಯನ್ನು ಬರೆದು ಕೊಟ್ಟರಂತೆ. ಅದು ಪ್ರಬುದ್ಧ ಕರ್ಣಾಟಕದಲ್ಲಿ ಅಚ್ಚಾಯಿತು. ಆರೋಗ್ಯ ಸ್ವಲ್ಪ ಸುಧಾರಿಸಿದ ಮೇಲೆ ೧೯೨೨ ರಲ್ಲಿ ಮೈಸೂರಿನ ಸಂಪದಭ್ಯುದಯ ಕಚೇರಿಯಲ್ಲಿ ನೌಕರರಾಗಿ ಸೇರಿದರು. ಕೆಲವೇ ದಿನಗಳಲ್ಲಿ ಅದನ್ನು ಬಿಟ್ಟು, ಮಂಗಳೂರಿಗೆ ಹೋಗಿ ಮಂಗಳೂರು ಪ್ರೆಸ್‌ನಲ್ಲಿ ಆಪರೇಟರಾಗಿ ಕೆಲವು ತಿಂಗಳು ದುಡಿದರು. ಮತ್ತೆ ಮೈಸೂರಿಗೆ ಬಂದು 'ವಿಗಡವಿಕ್ರಮರಾಯ' ನಾಟಕ ರಚಿಸಿದರು. ೧೯೨೪ರಲ್ಲಿ ಬೆಂಗಳೂರಿನಲ್ಲಿ ಕೆಲಕಾಲವಿದ್ದರು. ೧೯೨೫ರಲ್ಲಿ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯಲ್ಲಿ ಮತ್ತೆ ಕೆಲಸಕ್ಕೆ ಸೇರಿದರು. ಅಲ್ಲೂ ಕೆಲವೇ ತಿಂಗಳು ದುಡಿದು ಹಿಂತಿರುಗಿ ಮೈಸೂರಿಗೇ ಬಂದರು. ೧೯೨೬ರಲ್ಲಿ 'ವಿಜಯನಾರಸಿಂಹ' ನಾಟಕ ರಚಿಸಿದರು. ಮೈಸೂರಿನ ಶಾರದಾ ವಿಲಾಸ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿ ಸೇರಿಕೊಂಡರು. ಅಲ್ಲಿದ್ದಾಗಲೇ ಅವರ 'ವಿಗಡವಿಕ್ರಮರಾಯ' ನಾಟಕ ಪ್ರದರ್ಶನಗೊಂಡಿತು. ಅದನ್ನು ತಯಾರು ಮಾಡಿಸಿದವರೇ ಸಂಸರು. ತಮ್ಮ ನಿರೀಕ್ಷೆಯ ಮಟ್ಟಕ್ಕೆ ನಾಟಕ ಪ್ರಯೋಗ ಬರಲಿಲ್ಲವೆಂದು ಬೇಸರಗೊಂಡು ಶಾರದಾ ವಿಲಾಸ ಶಾಲೆಯ ಶಿಕ್ಷಕವೃತ್ತಿಯನ್ನೇ ತೊರೆದು ಹೋದರು. ಧಾರವಾಡಕ್ಕೆ ಹೋಗಿ ೧೯೨೮ರಲ್ಲಿ 'ಸಂಸಪದಂ' ಕಾವ್ಯ ರಚನೆ ಮಾಡಿದರು. ಮುಂದೆ ಯಾರ ಸಂಪರ್ಕ ಎಲ್ಲಿ ದೊರೆಯಿತೋ ತಿಳಿಯದು. ೧೯೨೮-೨೯ರಲ್ಲಿ ಡರ್ಬನ್, ನಾತಾಳಗಳಿಗೆ ಹೋದರು. ಅಲ್ಲಿ ಕೂಲಿಕಾರರಾಗಿ ದುಡಿದರೆಂದು ಹೇಳಲಾಗುತ್ತದೆ. ಅಧಿಕೃತ ಮಾಹಿತಿ ಈಗ ಲಭ್ಯವಿಲ್ಲದಿದ್ದರೂ ಕೂಡ ಪಾದ್ರಿಯೊಬ್ಬನ ಸ್ನೇಹಸಂಪಾದಿಸಿ ಕೂಲಿಗಳ ಮೇಲ್ವಿಚಾರಕರಾಗಿದ್ದರೆಂದೂ ಹಿಂತಿರುಗುವಾಗ ಹೇರಳ ಹಣ ಸಂಗ್ರಹಿಸಿಕೊಂಡು ಬಂದರೆಂದೂ ಅವರ ಅಣ್ಣನ ಮಗ, ಅ.ನ. ಸುಬ್ರಹ್ಮಣ್ಯಂ ಹೇಳುತ್ತಾರೆ. ಸುಮಾರು ೧೯೨೯-೩೦ರ ಸುಮಾರಿಗೆ ಕೊಚ್ಚೀನ್‌ಗೆ ಬಂದರೆಂದು ತೋರುತ್ತದೆ. ಮುಂದೆ ೧೯೩೦ ರಲ್ಲಿ ಸೇಂಟ್‌ಎಲೋಷಿಯಸ್‌ಶಾಲೆಯಲ್ಲಿ ಕೆಲಸಕ್ಕೆ ಸೇರಿದರೂ ಅದು ಸರಿಬರದೇ ೧೯೩೧ ರಲ್ಲಿ ಸರಸ್ವತಿ ಪ್ರಿಂಟಿಂಗ್‌ಪ್ರೆಸ್‌ನಲ್ಲಿ ಮ್ಯಾನೆಜರ್ ಆಗಿ ದುಡಿದರು. ೧೯೩೨ ರಲ್ಲಿ ಮತ್ತೆ ಮದರಾಸಿಗೆ ಹೋಗಿ ಅಲ್ಲಿ ಲಿಯೋಲಾ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿಕೊಂಡರು. ಅಲ್ಲಿಂದಲೇ ಕ್ವೆಟ್ಟಾಕ್ಕೆ ಹೋಗಿ ಕಂಟೋನ್ಮೆಂಟಿನಲ್ಲಿ ತಮಿಳು ಶಿಕ್ಷಕರಾಗಿ ಸೇವೆಸಲ್ಲಿಸತೊಡಗಿದರು. ಆದರೆ ೧೯೩೫ ರಲ್ಲಿ ಭೂಕಂಪವಾಗಿ ಕ್ವೆಟ್ಟಾ ಸರ್ವನಾಶವಾಯಿತು. ಹೇಗೋ ಬದುಕುಳಿದ ಸಂಸರು ವೈದ್ಯರೊಬ್ಬರ ನೆರವಿನಿಂದ ಕಲ್ಕತ್ತಾಕ್ಕೆ ಬಂದರು. ಅಲ್ಲಿ ಅವರು ಕ್ರಾಂತಿಕಾರರ ಸಂಪರ್ಕಕ್ಕೆ ಬಂದಿರಬೇಕೆಂದು ಊಹಿಸಲಾಗಿದೆ. ಒಂದು ಕೊಲೆಯ ಪ್ರಸಂಗದಲ್ಲಿ ಪೋಲೀಸರು ಕ್ರಾಂತಿಕಾರರಲ್ಲಿ ಕೆಲವರನ್ನು ಹಿಡಿದಾಗ ಅವರು ಸಂಸರನ್ನು ತೋರಿಸಿ ಪರಾರಿಯಾದರೆಂದೂ ಆ ಪೋಲಿಸನವರಿಂದ ಹೇಗೋ ತಪ್ಪಿಸಿಕೊಂಡು ಸಂಸರು ಬೆಂಗಳೂರಿಗೆ ಬಂದರೆಂದೂ ಕೆಲವರು ಹೇಳುತ್ತಾರೆ. ಪೋಲಿಸರು ತನ್ನ ಮೇಲೆ ಕಣ್ಣಿಟ್ಟಿದ್ದಾರೆಂಬ ಸಂಶಯದಿಂದ ಮಾನಸಿಕವಾಗಿ ಬಹಳೇ ಯಾತನೆಯನ್ನು ಅನುಭವಿಸಿದರು. ಸುಮಾರು ೩-೪ ವರ್ಷಗಳ ಪರದೇಶದ ತಿರುಗಾಟದ ಸಂದರ್ಭದಲ್ಲಿ ಎಲ್ಲಿ ಏನು ನಡೆಯಿತು ಎಂಬುದು ಸ್ಪಷ್ಟವಾಗಿ ಯಾರಿಗೂ ತಿಳಿಯದು. ೧೯೩೫ರಲ್ಲಿ ಇಜಿಪ್ತಿಗೆ ಹೋಗಿಬರಲು Multiple Journey Visa ಮಾಡಿಸಿಕೊಂಡಿದ್ದರು. ಆದರೆ ಅದನ್ನು ಬಳಸಲು ಸಾಧ್ಯವಾಗಿರಲಿಲ್ಲ.

## ೧.೩ ಪೋಲಿಸ್ ಭಯ:

೧೯೩೫ ರಿಂದ ಯಾವ ಕಾರಣಕ್ಕೋ ಅವರ ಒಳಪ್ರವೇಶಿಸಿದ ಖಾಕಿಭೂತ ಅವರು ಸಾಯುವವರೆಗೂ ಸುಮಾರು ಮೂರುವರೆ ವರ್ಷಗಳ ಕಾಲ ಅವರನ್ನು ಕಾಡುತ್ತಲೇ ಇತ್ತು. ೧೯೩೬ ರಲ್ಲಿ ಸಂಸರು ಬೆಂಗಳೂರಿನಿಂದ ಮೈಸೂರಿಗೆ ಬಂದರು. ನೂರಡಿರಸ್ತೆಯಲ್ಲಿ ಚಿಕ್ಕಯ್ಯನ ಮಹಡಿಯಲ್ಲಿ ಬಾಡಿಗೆ ಕೋಣೆಯೊಂದನ್ನು ಹಿಡಿದು ಉಳಿಯ ತೊಡಗಿದರು. ಅಲ್ಲಿಯೂ ಸುರಕ್ಷಿತವೆನ್ನಿಸದೇ ಅಲೆದಾಡಿ, ಕೊನೆಯಲ್ಲಿ ಸದ್ವಿದ್ಯಾಪಾಠಶಾಲೆಯ ಆವರಣದಲ್ಲಿರುವ ಕೊಠಡಿಯೊಂದಕ್ಕೆ ಬಂದರು. ಕೋಣೆಯ ಕಿಡಕಿ-ಬಾಗಿಲುಗಳನ್ನೆಲ್ಲಾ ಕಪ್ಪು ಬಟ್ಟೆಯಿಂದ ಮುಚ್ಚಿ, ಪೋಲಿಸರ ಭಯದಲ್ಲಿ ಹಗಲುಗತ್ತಲಲ್ಲಿಯೇ ಜೀವಿಸತೊಡಗಿದರು. ಆದರೆ ಈ ಅವಧಿಯಲ್ಲಿ 'ಬಿರುದಂಥೆಂಬರಗಂಡ' 'ಬೆಟ್ಟದರಸು' ನಾಟಕಗಳನ್ನು ಬರೆದರು. ೧೯೩೭ ರಲ್ಲಿ ಧಾರವಾಡಕ್ಕೊಮ್ಮೆ ಹೋದಾಗ ಮಿತ್ರರ ಅಪೇಕ್ಷೆಯಂತೆ 'ಅಸತಿ' ಎಂಬ ಏಕಾಂತ ನಾಟಕವನ್ನು 'ಪ್ರೇಮ' ಪತ್ರಿಕೆಯ ನಾಟಕಾಂಕದ ವಿಶೇಷ ಸಂಚಿಕೆಗಾಗಿ ಬರೆದು ಕೊಟ್ಟರು. ೧೯೩೭ ರಲ್ಲಿ ಮೈಸೂರಿನಲ್ಲಿಯೇ 'ಮಂತ್ರಶಕ್ತಿ' ನಾಟಕ ಬರೆದರು. ಒಟ್ಟಿನಲ್ಲಿ ಎಲ್ಲಿಯೂ ಹೆಚ್ಚುಕಾಲ ನೆಲೆನಿಲ್ಲದೇ ಪರ್ಯಟನ ಮಾಡುತ್ತಲೇ ಇದ್ದ ಜೀವ ಸಂಸರದು. ಸಂಸರ 'ಪೋಲೀಸ್‌ಭಯ' ಕೇವಲ ಭ್ರಮಾಸ್ವರೂಪದ್ದು, ಅನಗತ್ಯವಾದದ್ದು-ಎಂಬುದು ಅನೇಕರ ಅನ್ನಿಸಿಕೆ. ಆಪ್ತರಾದವರನೇಕರು ಸಂಸರಿಗೆ ತಿಳಿಸಿ ಹೇಳಿ ಭಯಮುಕ್ತರನ್ನಾಗಿ ಮಾಡಲು ಪ್ರಯತ್ನಿಸಿದರು. ಪೋಲಿಸ್‌ಇಲಾಖೆಯಿಂದ ಅವರ ಮೇಲೆ ಯಾವ ಕೇಸೂ ಇಲ್ಲದ ಆಧಾರ ಕಾಗದ ಪತ್ರತಂದು ತೋರಿಸಿದರೂ ಸಂಸರು ನಂಬಲಿಲ್ಲ. ಉಳಿದವರಿಗೆ ಭ್ರಮೆ ಎನ್ನಿಸುವ ಅಂಶ ಸಂಸರ ಮಟ್ಟಿಗೆ ಸತ್ಯವೇ ಆಗಿತ್ತು. ಎಂಬುದು ಮಹಾರಾಜರಿಗೆ ಬರೆದಿಟ್ಟಿದ್ದ ೧೮೩ ಪುಟಗಳ ಅಪೀಲಿನಿಂದ ಹಾಗೂ ಅವರ ಸ್ನೇಹಿತರ ಹೇಳಿಕೆಗಳಿಂದ ತಿಳಿದು ಬರುತ್ತದೆ. ಯಾರು ಸಮಾಧಾನ ಹೇಳಿದರೂ ನಂಬದೇ ಪೋಲಿಸ್‌ಭಯದಿಂದಲೇ ೧೪-೨-೧೯೩೯ ರಂದು ಸದ್ವಿದ್ಯಾಪಾಠಶಾಲೆಯ ಕೊಠಡಿಯಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವುದರ ಮೂಲಕ ಸಂಸರು ಎಲ್ಲರಿಂದ ಎಲ್ಲದರಿಂದ ತಮ್ಮನ್ನು ನೀಗಿಸಿಕೊಂಡರು. ೧೯೩೫ ಕ್ಕೂ ಮುಂಚೆಯೇ ನಾಲ್ಕೈದು ಬಾರಿ ಅವರು ಆತ್ಮಹತ್ಯೆಗೆ ಪ್ರಯತ್ನಿಸಿದರೂ ಸಫಲವಾಗಿರಲಿಲ್ಲ ಆದರೆ ಕೊನೆಗೂ ಅವರೇ ಗೆಲ್ಲುವಂತಾಯಿತು.

## ೧.೪ ವಿಚಿತ್ರ ವ್ಯಕ್ತಿತ್ವ:

ಆರಡಿ ಎತ್ತರದ ೧೬೦ ಪೌಂಡಿನ ಕಪ್ಪು ಬಣ್ಣದ ಭೀಮಕಾಯದ ವ್ಯಕ್ತಿ ಸಂಸ. ಮೀಸೆಯನ್ನು ಬೋಳಿಸಿದ, ಸಿಡುಬಿನ ಕಲೆಯಿಂದ ಕೂಡಿದ ಮುಖ, ವಿಶಾಲವಾದ ನುಣ್ಣನೆಯ ಹಣೆ, ಕಪ್ಪಾದ ಗಂಟಿಕ್ಕಿದ ಹುಬ್ಬುಗಳು, ಅವುಗಳ ಕೆಳಗೆ ಥಳ ಥಳಿಸುವ ಕಪ್ಪಾಲಿಗಳ ಕಣ್ಣುಗಳು. ಮೆಳ್ಳೆಗಣ್ಣಾದರೂ ತೀಕ್ಷ್ಣನೋಟ ಯಾರನ್ನಾದರೂ ದಂಗುಬಡಿಸುವಂತಹುದು. ಆದರೆ ತೀರಾ ಸಾದಾವ್ಯಕ್ತಿ. ಬದುಕಿ ಉಳಿಯಲಿಕ್ಕೆ ಅನಿವಾರ್ಯವಾದುದನ್ನು ಮಾತ್ರ ಬಯಸಿದಂಥವರು. ದಟ್ಟಿಸುತ್ತಿದ ಪಂಚೆ, ಕಾಲರಿಲ್ಲದ ಅರೆ ತೋಳಿನ ಬನಿಯನ್ನು. ಹೊರಗೆ ಹೋಗುವಾಗ ಒಂದು ಕೋಟು. ಇಷ್ಟೇ ಉಡುಗೆ-ತೊಡುಗೆ. ಮಲಗಲು ಒಂದು ಚಾಪೆ, ದಿನಕ್ಕೊಂದು ಪ್ಲೇಟ್‌ಊಟ. ಅವರಿಗೆ ಬೀಡಿ ಸೇದುವ ಚಟ ಮಾತ್ರವಿತ್ತು. ಸೋಡಾ ಮತ್ತು ಪುರಿ ತಿಂದು ದಿನ ಕಳೆಯುವದೂ ಇತ್ತು ಎನ್ನಲಾಗಿದೆ.

ಹಿರಿಯರು ಮದುವೆ ಮಾಡುತ್ತೇನೆಂದಾಗ ಒಪ್ಪದೇ, ತಾವು ಮದುವೆಯಾಗಬೇಕಂದಾಗ ಹಿರಿಯರು ಒಪ್ಪದೇ, ಒಟ್ಟಿನಲ್ಲಿ ಗೃಹಸ್ಥ ಜೀವನವನ್ನು ಅವರು ನಡೆಸಲು ಸಾಧ್ಯವಾಗಲಿಲ್ಲ. ಇದರಿಂದ ಅಲೆಮಾರಿ ಜೀವನವನ್ನೇ ರೂಢಿಮಾಡಿಕೊಂಡಿದ್ದರು. ಕೊನೆ ಕೊನಗೆ ಸಿಡುಕಿನ ವ್ಯಕ್ತಿಯಾಗಿದ್ದರೂ ಬಾಲ್ಯದಲ್ಲಿ ಹಾಸ್ಯ ಪ್ರವೃತ್ತಿಯವರಾಗಿದ್ದರು. ಅವರಿಗೆ ಇಂಪಾದ ಕಂಠಶ್ರೀ ಇದ್ದು, ಮದುವೆಯ ಹಾಡುಗಳನ್ನು ಕಟ್ಟಿಹಾಡುತ್ತಿದ್ದರಂತೆ. ಹೆಣ್ಣು ಮಕ್ಕಳ ಕೈಲಿ ಕುಹಕದ ಹಾಡು ಕಟ್ಟಿ ಹೇಳಿಸಿ ಗುಲ್ಲೆಬ್ಬಿಸುತ್ತಿದ್ದರಂತೆ. ಬೀಗರ ಹಾಡು ಕಟ್ಟಿ ಮರೆಯಲ್ಲಿ ಕುಳಿತು ಹಾಡುತ್ತಿದ್ದರಂತೆ. ಆದರೆ ಇಂಥ ವ್ಯಕ್ತಿ ಕೊನೆ ಕೊನೆಯಲ್ಲಿ ಸಹಜ ಮಾತನ್ನಾಡಿದರೂ ರೇಗಿಕೊಳ್ಳುವ ಸ್ಥಿತಿಗೆ ಬಂದಿದ್ದರೆನ್ನುವುದು ಗಮನಿಸಬೇಕಾದ ಅಂಶ. ಹೀಗಾಗಿ, ಆ ಕಾಲದಲ್ಲಿ ಇವರ ಸಹವಾಸದಲ್ಲಿ ಬಂದವರೆಲ್ಲ ಒಂದಲ್ಲ ಒಂದು ರೀತಿಯ ಕಷ್ಟಕ್ಕೆ ಸಿಲುಕಿಕೊಂಡವರೇ. ಸಂಸರಿಗೆ ಯಾವಾಗಲೂ ಹಣದ ಅಡಚಣೆ ಇರುತ್ತಿತ್ತು. ಆದರೆ ಪರಿಚಯಸ್ಥರು ಯಾರನ್ನಾದರೂ ಅವರು ಕೇಳಿದರೆ, ಕೇಳಿದಷ್ಟು ಮಾತ್ರ

ಹಣಕೊಡಬೇಕು. ಇಲ್ಲವೆಂದು ಕಡಿಮೆ ಕೊಟ್ಟರೂ ಕಷ್ಟ, ಪಾಪ ಕೆಲವು ದಿನ ಸುಖವಾಗಿ ಜೀವಿಸಲಿ ಎಂದು ಹೆಚ್ಚು ಹಣಕೊಟ್ಟರೂ ಕಷ್ಟ. ಸಲಿಗೆ ತೋರಿಸಿದರೆ, ಹೆಚ್ಚು ವಿಚಾರಿಸಿಕೊಂಡರೆ, ಸಿ.ಐ.ಡಿ ಕೆಲಸ ಮಾಡುತ್ತಿದ್ದಾರೆಂದು ಗದರಿಸಿ ದೂರ ತಳ್ಳಿಬಿಡುತ್ತಿದ್ದರು. ತಮ್ಮ ಪಾಡಿಗೆ ತಾವು ಉಳಿದು ಬಿಟ್ಟರೆ ತನ್ನನ್ನು ಕಂಡರೆ ಅಸೂಯೆ, ಪ್ರತಿಷ್ಠೆ ಎಂದು ಬಗೆಯುತ್ತಿದ್ದರು. ಆ ಕಾಲದ ಅನೇಕ ಸಾಹಿತಿಗಳಿಗೆ ಅವರ ಸಹವಾಸದ ಅನುಭವವಾಗಿತ್ತು. ಗೋವಿಂದ ಪೈ, ಪಂಜೆ ಮಂಗೇಶರಾಯ, ಜಿ.ಪಿ, ರಾಜರತ್ನಂ,ಎನ್.ಎಸ್. ಸೀತಾರಾಮಶಾಸ್ತ್ರಿ, ಆನಂದ (ಎ. ಸೀತರಾಂ) ಮುಂತಾದವರು ಸಂಸರೊಂದಿಗಿನ ತಮ್ಮ ಅನುಭವವನ್ನು ದಾಖಲಿಸಿದ್ದಾರೆ. ನಿಟ್ಟೂರು ಶ್ರೀನಿವಾಸರಾಯರು, ಎಸ್.ಜಿ. ಶಾಸ್ತ್ರಿಗಳು, ಜಿ.ಪಿ. ರಾಜರತ್ನಂ ಮುಂತಾದವರಿಗೆ, ಪ್ರತಿಭಾವಂತರಾದ ಹಾಗೂ ಅರಮನೆಯ ಒಳಹೊರಗನ್ನು ಕೂಲಂಕುಷವಾಗಿ ಬಲ್ಲ ಸಂಸರನ್ನು ಹೇಗಾದರೂ ಮಾಡಿ ನಾಟಕ ಸಾಹಿತ್ಯ ರಚನೆಯಲ್ಲಿ ತೊಡಗಿಸಬೇಕು, ಮೈಸೂರು ಅರಸರ ಚರಿತ್ರೆಯನ್ನು ನಾಟಕವಾಗಿಸಬೇಕು, ಎಂಬ ತೀವ್ರವಾದ ಹಂಬಲವಿತ್ತು. ಅದಕ್ಕಾಗಿಯೇ ತಮ್ಮ ಕೈಲಾದ ಸಹಾಯ ಮಾಡಲು, ಸಂಸರಿಗೆ ಆರ್ಥಿಕ ನೆರವನ್ನೀಯಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಆದರೆ ಸಂಸರ ಮೊಂಡುತನ, ಸಂಶಯ ಪ್ರವೃತ್ತಿ ಅವರ ಆಶೆಯನ್ನು ಈಡೇರಿಸಗೊಡಲಿಲ್ಲ. 'ಮಂತ್ರಶಕ್ತಿ' ನಾಟಕದ ಹಸ್ತಪ್ರತಿಯನ್ನು ದೇವರಾಜ ಬಹಾದ್ದೂರ್ ಪಾರಿತೋಷಕದ ಸ್ಪರ್ಧೆಗೆ ಕಳಿಸಬೇಕೆಂದು ಆನಂದರು ಪ್ರಯತ್ನಿಸಿದರೂ ಸಂಸರು ಅದನ್ನು ಆಗುಗೊಡಲಿಲ್ಲ.

ಇಂಥ ವಿಚಿತ್ರ ಸನ್ನಿವೇಶಗಳ ಮಧ್ಯೆಯೂ ಸಂಸರ ನಾಟಕ ರಚನೆಯಲ್ಲಿ ತೊಡಗಿದ್ದುದು ಒಂದು ವಿಶೇಷ. ಇವನ್ನೆಲ್ಲ ಮೀರಿ ಬಾಳಲು ಅವರು ನಾಟಕ ರಚಿಸುತ್ತಿದ್ದರೋ ಅಥವಾ ನಾಟಕ ರಚಿಸುವಾಗ ಮೈಸೂರು ಅರಮನೆ ಒಳಡಾಳಿತ, ಯುದ್ಧ, ಪಿತೂರಿ ಮುಂತಾದವುಗಳಿಗೆ ಸಂಬಂಧಿಸಿದ ಮಾಹಿತಿಗಳ ಸಂಗ್ರಹದಿಂದ, ಸಂತತವಾಗಿ ಮನಸ್ಸನ್ನು ಇಂಥ ವಿಷಯಗಳ ಮೇಲೆ ಕೇಂದ್ರೀಕರಿಸಿದ್ದರಿಂದ ಅವರ ವರ್ತನೆ ಆ ರೀತಿ ಆಗುತ್ತಿತ್ತೋ ತಿಳಿಯದು. ಆದರೆ ಅಸಾಧಾರಣ ಪ್ರತಿಭೆಯ ವ್ಯಕ್ತಿ ಎಂಬುದರಲ್ಲಿ ಸಂಶಯವಿಲ್ಲ. ಅಧಿಕೃತ ಮಾಹಿತಿ ಸಂಗ್ರಹಗಳಿಗಾಗಿ ಅವರು ಮೈಸೂರಿನ ಓರಿಯಂಟಲ್‌ರಿಸರ್ಚ ಇನಸ್ಟಿಟ್ಯೂಟ ಮತ್ತು ಅರಮನೆಯ ಸರಸ್ವತಿ ಭಂಡಾರಗಳನ್ನು ಸಂಪೂರ್ಣ ಬಳಸಿಕೊಂಡಿರುವುದಲ್ಲದೇ ಮೈಸೂರು ಅರಸರ ಇತಿಹಾಸವನ್ನು ಕುರಿತು ರಚಿತವಾಗಿರುವ ಗ್ರಂಥಗಳನ್ನೆಲ್ಲ ಪರಾಮರ್ಶಿಸಿದ್ದಾರೆ. 'ವಂಶಾವಳಿ' 'ವಂಶರತ್ನಾಕರ' 'ಕಂಠೀರವನರಸರಾಜವಿಜಯ' 'ಚಿಕ್ಕದೇವರಾಜ ವಿಜಯ' 'ರಾಜಾವಳೀಕತೆ' 'ಕೆಳದಿನೃಪ ವಿಜಯ' ಮುಂತಾದಚಾರಿತ್ರಿಕ ಕೃತಿಗಳನ್ನಲ್ಲದೇ ಮೈಸೂರು ಗೆಜೆಟಿಯರ್, 'ಎಪಿಗ್ರಾಫಿಕಾ ಕರ್ನಾಟಿಕಾ' 'ಆರ್ಕ್ಯಾಲಾಜಿಕಲ್‌ರಿಪೋರ್ಟ್ಸ,' ವಿಲ್ಕನ 'ಮೈಸೂರಿನ ಇತಿಹಾಸ' ಮುಂತಾದ ಅನೇಕ ಆಕರಗಳನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿ ಮಾಹಿತಿ ಸಂಗ್ರಹಿಸಿದ್ದಾರೆ. ತಮ್ಮ ಅಲೆಮಾರಿ ಜೀವನದಲ್ಲಿಯೂ ಮೈಸೂರಿಗೆ ಆಗಾಗ ಭೆಟ್ಟಿ ನೀಡಿ, ಹೆಚ್ಚಿನ ಸಮಯವನ್ನು ಲೈಬ್ರರಿಗಳಲ್ಲಿ ಕಳೆಯುತ್ತಿದ್ದರೆಂದು ಸ್ನೇಹಿತರು ಹೇಳುತ್ತಾರೆ.

ಸಂಸರ ಹಸ್ತಾಕ್ಷರ ತುಂಬಾ ಆಕರ್ಷಕವಾದುದು. ಇಂಗ್ಲೀಷೇ ಆಗಿರಲಿ, ಕನ್ನಡವೇ ಆಗಿರಲಿ, ಮುದ್ದಾದ ಅಕ್ಷರಗಳು ಪೂರ್ಣತೆಯನ್ನು ಬಯಸುವ ವ್ಯಕ್ತಿ ಎಂಬುದನ್ನು ಸಾರಿ ಹೇಳುತ್ತಿದ್ದವು. ಅವರು ಜ್ಯೋತಿಷ, ಸಾಮುದ್ರಿಕ, ರಮಲ ಶಾಸ್ತ್ರವನ್ನು ಕಲಿತವರು. ಕರಾರುವಾಕ್ಕಾಗಿ ಎಲ್ಲವನ್ನೂ ಹೇಳುತ್ತಿದ್ದರಂತೆ.

ಸಂಸರಿಗೆ ಯಾವ ಧರ್ಮದಲ್ಲಿಯೂ ನಿಜವಾದ ನಂಬಿಕೆ ಇರಲಿಲ್ಲ. ಆರ್ಥಿಕ ಮುಗ್ಗಟ್ಟಿನಿಂದಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಧರ್ಮಗಳಿಗೆ ಅಂದರೆ ಒಮ್ಮೆ ಇಸ್ಲಾಂ. ಒಮ್ಮೆ ಕ್ರಿಶ್ಚಿಯನ್‌ಮತ್ತೊಮ್ಮೆ ಬೌದ್ಧಧರ್ಮಕ್ಕೆ ಪರಿವರ್ತನೆ ಹೊಂದಬೇಕೆಂದು ಮನಸ್ಸು ಮಾಡಿದ್ದರೂ ಹಾಗೆ ಮತಾಂತರ ಹೊಂದಲಿಲ್ಲ. ಸಾಯುವಾಗಂತೂ 'ಯಾವ ಧರ್ಮದಲ್ಲಿಯೂ ನನಗೆ ನಂಬಿಕೆ ಇಲ್ಲ. ನನ್ನ ಶವವನ್ನು ಬಯಲಿನಲ್ಲಿ ಸುಟ್ಟು ಬಿಡಿ. ನಾಲ್ಕು ದಿಕ್ಕಿಗೂ ಗಾಳಿಯಲ್ಲಿ ನನ್ನ ಬೂದಿ ಚದುರಿ ಹೋಗಲಿ' ಎಂದು ನಿರೀಶ್ವರವಾದಿಗಳಂತೆ ಬರೆದಿಟ್ಟು ಸತ್ತರು.

ಸಂಸರು ಕೆಲವೊಮ್ಮೆ ಹಣಕ್ಕಾಗಿ ತಮ್ಮ ಹಸ್ತ ಪ್ರತಿಗಳನ್ನು ಮಾರುತ್ತಿದ್ದರು. ಅಥವಾ ಒತ್ತೆ ಇಡುತ್ತಿದ್ದರು. ನಿಟ್ಟೂರು ಶ್ರೀನಿವಾಸರಾಯರಿಗೆ ತಮ್ಮ 'ಮಂತ್ರಶಕ್ತಿ' ನಾಟಕವನ್ನು ಮಾರಿದ ಕತೆ ಸ್ವಾರಸ್ಯಕರವಾಗಿದೆ. ಜಿ.ಪಿ. ರಾಜರತ್ನಂ ಅವರು ಸಂಸರನ್ನು ಮೊಟ್ಟಮೊದಲು ನೋಡಿದ್ದು,

ಅವರು ಅಂಗಡಿ ಮಾಲಿಕರೊಬ್ಬರಿಗೆ ಹಸ್ತಪ್ರತಿಯೊಂದನ್ನು ಮಾರಲು ಪ್ರಯತ್ನಿಸುತ್ತಿದ್ದ ಸಂದರ್ಭದಲ್ಲಿಯೇ. ಕೆಲವು ಬಾರಿ ಒಪ್ಪಂದವಾದ ಮೇಲೂ ಸಂಸರು ಹಸ್ತಪ್ರತಿಯನ್ನು ಹಿಂದಕ್ಕೆಕ ಒಯ್ದುದುಂಟು. ಸಂಸರು ಒಟ್ಟು ಇಪ್ಪತ್ತೂರು ನಾಟಕಗಳನ್ನು ಬರೆದಿದ್ದಾರೆನ್ನಲಾಗುತ್ತಿದ್ದು. ನಮಗೆ ದೊರೆತಿದ್ದು ಆರು ಮಾತ್ರ. ಉಳಿದವನ್ನು ಗಿರವಿ ಇಟ್ಟು ಮರೆತು ಕಳೆದುಕೊಂಡಿರಬಹುದು ಅಥವಾ ಯಾರ ಮೇಲಾದರೂ ಕೋಪಗೊಂಡು ಸುಟ್ಟು ಅಥವಾ ಹರಿದು ಹಾಕಿರಬಹುದು. ಅಥವಾ ಬರೆಯುತ್ತೇನೆಂದು ಟಿಪ್ಪಣಿಮಾಡಿಟ್ಟುಕೊಂಡು ಬರೆಯದೆಯೂ ಇದ್ದಿರಬಹುದು. ಅವರು ಅಷ್ಟೂ ನಾಟಕಗಳನ್ನು ರಚಿಸಿ, ಅವು ಈಗ ಇಲ್ಲವಾಗಿದ್ದಲ್ಲಿ ಕನ್ನಡ ನಾಟಕ ಸಾಹಿತ್ಯಕ್ಕೆ ತುಂಬಲಾರದ ನಷ್ಟವಾಗಿದೆ ಎನ್ನಬಹುದು. ಜಿ.ಪಿ. ರಾಜರತ್ನಂ ನೀಡಿರುವ ೨೩ ನಾಟಕಗಳ ವಿಷಯ ವಿವರಗಳನ್ನು ಓದಿದರೆ, ಆ ನಾಟಕಗಳಿಂದ ಮೈಸೂರು ಅರಸರ ರಾಜಕೀಯ ಸಾಂಸ್ಕೃತಿಕ ಜೀವನದ ಸ್ವರೂಪ ಸಮಗ್ರವಾಗಿ ದೊರೆಯುತ್ತಿತ್ತೆಂದು ಅನ್ನಿಸುತ್ತದೆ. ಅಂತ ಒಂದು ಲಾಭ ಸದ್ಯಕ್ಕೆ ಇಲ್ಲವಾದರೂ ಲಭ್ಯವಿರುವ ಆರು ನಾಟಕಗಳಾದರೂ ಮೈಸೂರು ಅರಸರ ಕಾಲದ ಸಾಂಸ್ಕೃತಿಕ ಜೀವನವನ್ನು ಅರಿಯಲು ಸಹಾಯ ಮಾಡುವಂತಿವೆ. ಸಂಸರ ಆಪಾರ ಶ್ರಮದಿಂದ ಮತ್ತೆಲ್ಲೂ ದೊರೆಯದ ಆ ಕಾಲದ ಜನ ಜೀವನದ ವಿಪುಲ ಸಾಮಗ್ರಿ ಅವುಗಳಲ್ಲಿ ಹುದುಗಿದೆ.

## ೧.೪ ರಂಗಭೂಮಿಯ ನಂಟು:

ನಾಟಕ ಸಾಹಿತ್ಯ ರಚನೆಯೊಂದಿಗೆ ಸಂಸರಿಗೆ ಅಂದಿನ ರಂಗಭೂಮಿಯ ನಟರ, ನಿರ್ದೇಶಕರ, ನಾಟಕ ಕಂಪನಿಯವರ ನಿಕಟ-ಸಂಪರ್ಕ ಇತ್ತೆನ್ನಬಹುದು. ಕೈಲಾಸಂ, ವರದಾಚಾರ್ಯ, ಮಹಮ್ಮದ ಪೀರ, ಎಚ್.ಎಲ್.ಎನ್.ಸಿಂಹ, ಬಿ.ಆರ್. ಪಂತಲು ಮುಂತಾದವರೊಂದಿಗೆ ಒಳ್ಳೆಯ ಸ್ನೇಹವಿತ್ತು. ಸಂಜೆ ಹೊತ್ತಿನಲ್ಲಿ ಮಾಡರ್ನ ಹಿಂದೂ ಹೋಟೆಲ್ಲಿನ ರೂಮೊಂದರಲ್ಲಿ 'ಮಿತ್ರಗೋಷ್ಠಿ' ನಡೆಯುತ್ತಿತ್ತು. ನಾಟಕ ಪ್ರಪಂಚಕ್ಕೆ ಸಂಬಂಧಿಸಿದ ನೂರಾರು ವಿಷಯಗಳ ಚರ್ಚೆ ಅಲ್ಲಿ ನಡೆಯುತ್ತಿತ್ತು ಅ.ನ. ಸುಬ್ರಹ್ಮಣ್ಯಂರವರ ಪ್ರಕಾರ ಕೈಲಾಸಂರೊಬ್ಬರೇ ಸಂಸರೊಂದಿಗೆ ಹೆಚ್ಚು ಸಲಿಗೆಯಿಂದ ವರ್ತಿಸಬಲ್ಲವರಾಗಿದ್ದರು, ಅವರ ದೌರ್ಬಲ್ಯಗಳನ್ನು ಬಲ್ಲವರಾಗಿದ್ದರು. ಸಂಸರು ನಾಟಕ ನಿರ್ದೇಶನವನ್ನೂ ಮಾಡುತ್ತಿದ್ದರು. ಅವರ ನಾಟಕಗಳಲ್ಲಿ ವಿಗಡವಿಕ್ರಮರಾಯ ಹೆಚ್ಚುಬಾರಿ ಪ್ರಯೋಗಿಸಲ್ಪಟ್ಟ ನಾಟಕ. ಶಾರದಾ ವಿಲಾಸ ಶಾಲೆಯಲ್ಲಿದ್ದಾಗ 'ವಿಗಡವಿಕ್ರಮರಾಯ' ಮೊದಲಬಾರಿಗೆ ಪ್ರದರ್ಶಿತವಾಯಿತು. ನಾಟಕ ಶಿರೋಮಣಿ ಎ.ವಿ. ವರದಾಚಾರ್ಯರೇ ಗ್ರೀನರೂಮ್, ವೇಷಭೂಷಣ ಮುಂತಾದ ಸೌಕರ್ಯ ಮಾಡಿಕೊಟ್ಟರು. ಆಗಿನ ಕಾಲದಲ್ಲಿ ನಿರ್ದೇಶಕರನ್ನು 'ಪ್ರ್ಯಾಕ್ಟೀಸ್‌ಮ್ಯಾನೆಜರ್' ಎಂದು ಕರೆಯುತ್ತಿದ್ದರು. ವಿಗಡವಿಕ್ರಮರಾಯ ನಾಟಕದ ಪ್ರಾಕ್ಟೀಸ್‌ಮ್ಯಾನೆಜರ್ ಆಗಿದ್ದ ಸಂಸರು ಬಡಪೆಟ್ಟಿಗೆ ಯಾವುದನ್ನೂ ಒಪ್ಪಿಕೊಳ್ಳುವವರಲ್ಲ. ನಟರು ತಮ್ಮ ಅಭಿನಯದಿಂದ ಅವರನ್ನು ಮೆಚ್ಚಿಸುವುದು ಕಷ್ಟವೇ ಆಗಿತ್ತು. ಪ್ರದರ್ಶನ ಸಂಸರ ನಿರೀಕ್ಷೆಯ ಮಟ್ಟಕ್ಕೆ ಬಾರದೇ ಇದ್ದರೂ ಜನ ಮೆಚ್ಚಿಕೊಂಡರು. ಮತ್ತೊಮ್ಮೆ ಅದೇ ನಾಟಕ ರತ್ನಾವಳಿ ಶಾಲೆಯಲ್ಲಿ ಪ್ರದರ್ಶಿತವಾಯಿತು. ವರದಾಚಾರ್ಯರು, ಅಂದಿನ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್‌ರು ನೋಡಿ ಆನಂದ ಪಟ್ಟರು. ೧೯೩೦ ರಲ್ಲಿ ಚಿಕ್ಕಮಗಳೂರಿನ ಹೈಸ್ಕೂಲೊಂದರಲ್ಲಿಯೂ ಸಂಸರು ಅದೇ ನಾಟಕವನ್ನು ನಿರ್ದೇಶಿಸಿ ಪ್ರದರ್ಶಿಸಿದರು. ಮತ್ತೊಮ್ಮೆ ಅರಮನೆಯಲ್ಲಿ ಪ್ರದರ್ಶಿತಗೊಂಡಾಗ ಸಂತಸಗೊಂಡ ಶ್ರೀ ಮನ್ಮಹಾರಾಜ ನಾಲ್ವಡಿಕೃಷ್ಣರಾಜ ಒಡೆಯರು ಸಂಸರನ್ನು ಸನ್ಮಾನಿಸಬೇಕೆಂದಾಗ ಸಂಸರು ಅಲ್ಲಿ ಇರಲೇ ಇಲ್ಲವಂತೆ. ಕೊನೆಗೆ ಸುದ್ದಿ ತಿಳಿದಾಗ `Play is the thing' ಎಂದರಂತೆ! ಸಂಸರು ತಮ್ಮ ನಾಟಕಗಳನ್ನಲ್ಲದೇ ಬೇರೆ ನಾಟಕಗಳನ್ನೂ ನಿರ್ದೇಶಿಸಿದ್ದು ತಿಳಿದು ಬರುತ್ತದೆ. ಉದಾಹರಣೆಗೆ ಮಹಮ್ಮದ ಪೀರರ ಸಲುವಾಗಿ ಗೌತಮ ಬುದ್ಧ ನಾಟಕವನ್ನು ನಿರ್ದೇಶಿಸಿ ಕೊಟ್ಟರಂತೆ. ಆದರೆ ಎಲ್ಲದರಲ್ಲಿಯೂ ಪೂರ್ಣತೆಯನ್ನು ಅಪೇಕ್ಷಿಸುವ ವ್ಯಕ್ತಿಯಾಗಿದ್ದರು ಎಂಬುದಂತೂ ದಿಟ.

## ೨ ಬರಹ : ೨.೧ ಕಾದಂಬರಿ-ಕಾವ್ಯ:

ಸಂಸರು ೧೯೧೪ ರಲ್ಲಿಯೇ ಅಂದರೆ ತಮ್ಮ ೧೬ನೆಯ ವಯಸ್ಸಿನಲ್ಲಿಯೇ ಬರವಣಿಗೆಯನ್ನು ಪ್ರಾರಂಭಿಸಿದರು. 'ಕೌಶಲ' ವೆಂಬ ಪತ್ತೇದಾರಿ ಕಾದಂಬರಿಯನ್ನು ಮೊದಲು ರಚಿಸಿದರು. ಅದು 'ಕರ್ನಾಟಕ ಚಂದ್ರಿಕೆ' ಗ್ರಂಥಮಾಲೆಯ ೪೯ನೆಯ ಪುಸ್ತಕವಾಗಿ ಪ್ರಕಟವಾಯಿತು.

ಪ್ರೇಮವೇ ಮುಖ್ಯವಸ್ತುವಾಗಿರುವ ಈ ಕಾದಂಬರಿಯ ಸನ್ನಿವೇಶಗಳು ಕೆಲವಡೆ ಅಸಹಜ ನಾಟಕೀಯವೆನ್ನಿಸುತ್ತವೆ. ಆದರೆ ಹದಿನಾರರ ವಯಸ್ಸಿನಲ್ಲಿಯೆ ಸಂಸರು ವಸ್ತು ಮತ್ತು ಭಾಷೆಯ ಮೇಲೆ ಸಾಧಿಸಿದ ಹಿಡಿತ ಮೆಚ್ಚುವಂತಹುದು. ಮುಂದೆ ಸಂಸರು ೧೯೧೮ರಲ್ಲಿ 'ಶ್ರೀಮಂತೋದ್ಯಾನ ವರ್ಣನಂ' ಎಂಬ ಕಾವ್ಯವನ್ನೂ, ಮಂತ್ರಿವರ್ಯರಾದ 'ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು' ಎಂಬ ಸ್ತೋತ್ರ ಮಾಲಿಕೆಯನ್ನೂ ೧೯೨೨ ರಲ್ಲಿ 'ಸಂಸಪದಂ' ಎಂಬ ಪ್ರೌಢಕಾವ್ಯವನ್ನೂ ರಚಿಸಿದರು. ಈ ಕೃತಿಗಳು ಸಂಸರ ಕಾವ್ಯ ಸಾಮರ್ಥ್ಯವನ್ನು ಅರಿಯಲು ಸಹಾಯಕವಾಗಿವೆ. ಇವನ್ನಲ್ಲದೇ ಸಂಸರು 'ನರಕ ದುರ್ಯೋಧನೀಯಂ' 'ಈಶ ಪ್ರಕೋಪನ' 'ಅಚ್ಚುಂಬಶತಕ' ಮುಂತಾದ ಕಾವ್ಯಗಳನ್ನು ರಚಿಸಿದ್ದು ಅವು ಉಪಲಬ್ಧವಿಲ್ಲವಾಗಿವೆ. ಅವುಗಳ ಪದ್ಯಗಳನ್ನು ಮತ್ತು ವ್ಯಾಖ್ಯಾನಗಳನ್ನು ಕೇಳಿದ ಸ್ನೇಹಿತರ ಸಿಹಿನೆನಪು ಮಾತ್ರ ಈಗ ಉಳಿದಿದೆ.

'ಶ್ರೀಮಂತೋದ್ಯಾನ ವರ್ಣನಂ' ಇದು ಸಂಸ್ಕೃತ ಭೂಯಿಷ್ಠವಾದ ಹಳಗನ್ನಡ ಶೈಲಿಯಲ್ಲಿದೆ. ಕಂದಪದ್ಯ ಹಾಗೂ ಗದ್ಯಗಳಿಂದ ಕೂಡಿದೆ. ಇದರಲ್ಲಿ ಕವಿಯ ಭಾಷಾ ಪ್ರೌಢಿಮೆಯನ್ನು ಗುರುತಿಸಬಹುದಾಗಿದೆ. ಅದರಂತೆ ವಿಶ್ವೇಶ್ವರಯ್ಯನವರನ್ನು ಕುರಿತ ಕಾವ್ಯವೂ ವೃತ್ತಗಳಲ್ಲಿ ಹಣೆಯಲ್ಪಟ್ಟಿದೆ. ಮೇಲಿನ ಎರಡು ಕೃತಿಗಳಿಗಿಂತ 'ಸಂಸಪದಂ' ಹೆಚ್ಚು ವೈಶಿಷ್ಟ್ಯ ಪೂರ್ಣವಾದುದು. ಇದರಲ್ಲಿ ಮಾಲಿನೀ, ಶಾರ್ದೂಲ ವಿಕ್ರೀಡಿತ, ಕಳಾಭಾಷಿಣೀ, ಉತ್ಪಲಮಾಲಾ, ಚಿತ್ರಲತೆ, ಕಂದ, ಚಂಪಕ ಮಾಲಾ, ಛಂದೋವತಂಸ, ವನಮಯೂರ, ಮಂದಾಕ್ರಾಂತ, ತ್ರಿಪದಿ, ಮದನವತಿ, ಸಾಂಗತ್ಯ, ರೋಧಕಂ, ಎಡೆಯಕ್ಕರ, ಮತ್ತೇಭವಿಕ್ರೀಡಿತ, ವಾರ್ಧಕಷಟ್ಪದಿ, ಲಲಿತಪದಂ, ದೊರೆಯಕ್ಕರ, ದಂಡಕ, ಕಿರಿಯಕ್ಕರ, ಉತ್ಸಾಹ ರಗಳೆ, ಅರ್ಧಸಮವೃತ್ತ, ದ್ರುತಪದಂ, ತ್ರಿವುಡೆ, ದುವಯಿ, ಚೌಪದಿಯ ಹಾಡು, ಲಲಿತ ರಗಳೆ, ಆರ್ಯಾ, ಮಹಾಸ್ರಗ್ಧರಾ, ಸ್ರಗ್ಧರಾ, ಪ್ರವರ, ಗೀತಿಕೆ, ಏಳೆ, ಅಕ್ಕರಿಕೆ, ವಂಶಸ್ಥ, ಮಲ್ಲಿಕಾಮಾಲೆ, ಉತ್ಸಾಹವೃತ್ತ, ಪಿರಿಯಕ್ಕರ, ಭಾಮಿನಿಷಟ್ಪದಿ ವೈತಾಳಿಕೆ, ಚೌಪದಿ, ಸೀಸ ಮುಂತಾಗಿ ನಾಲ್ವತ್ತಕ್ಕೂ ಹೆಚ್ಚು ಛಂದೋಪ್ರಕಾರಗಳನ್ನು ಬಳಸಿಕೊಂಡು ಕವಿತ್ವ, ಕವಿಸ್ತವನಗಳನ್ನು ಮಾಡಿದ್ದಾರೆ. ಕವಿಗೆ ಸಂಸ್ಕೃತ ಹಾಗೂ ಕನ್ನಡ ಛಂದಸ್ಸುಗಳ ಮೇಲಿರುವ ಹಿಡಿತಕ್ಕೆ, ಪಾಂಡಿತ್ಯ ಪ್ರದರ್ಶನಗಳಿಗೆ ಈ ಕಾವ್ಯನಿದರ್ಶನವಾಗಿದೆ. ಎಸ್.ಎಸ್.ಎಲ್.ಸಿ ಪಾಸು ಮಾಡಲಾಗದ ಹುಡುಗ, ನಂತರ ಕರಿಬಸವ ಶಾಸ್ತ್ರಿಗಳು ಹಾಗೂ ಇತರ ಪಂಡಿತರ ಸಹಾಯದಿಂದ ಹಳಗನ್ನಡ ಭಾಷೆ ಛಂದಸ್ಸುಗಳ ಮೇಲೆ ಎಂತಹ ಹತೋಟಿ ಸಾಧಿಸಿಕೊಂಡಿದ್ದರೆಂಬುದನ್ನು ಈ ಕಾವ್ಯದ ಮೂಲಕ ನೋಡಬಹುದು. 'ನರಕದುರ್ಯೋಧನೀಯಂ'ದಲ್ಲಿ ಸತ್ತುನರಕ ಸೇರಿದ ಮೇಲೆ, ದುರ್ಯೋಧನ ತನ್ನ ನಡತೆಯನ್ನು ಸಮರ್ಥಿಸಿಕೊಳ್ಳುತ್ತಾನೆ. ಸಂಸರ ದುಷ್ಟಪಾತ್ರಗಳು ಬರಿಯದುಷ್ಟರಲ್ಲ. ಸಮರ್ಥನೀಯರೂ ಹೌದು ಎಂಬುದನ್ನು ಸಂಸರ ಈ ಕಾವ್ಯ ಪ್ರತಿಪಾದಿಸುತ್ತದೆ. ಆದರೆ, ಇಂದು ಇದು ಉಪಲಬ್ಧವಿಲ್ಲ.

ಸಂಸರು ಇಂಗ್ಲೀಷಿನಲ್ಲಿ Indian sherlock Holmes in England ಎಂಬ ಹೆಸರಿನ ಕಾದಂಬರಿಯನ್ನು ಬರೆದಿದ್ದರಂತೆ. ಅದನ್ನು ಎಡಿನ್‌ಬರೋ ಪ್ರಕಟನಾಲಯವೊಂದು ಮುದ್ರಿಸಿ ಪ್ರಕಟಿಸಲು ಒಪ್ಪಿಕೊಂಡಿತ್ತಂತೆ. ಆದರೆ ಕರಾರಿನಲ್ಲಿ ಯಾವುದೋ ತಕರಾರು ಹೂಡಿ ಸಂಸರು ಅದನ್ನು ರದ್ದುಗೊಳಿಸಿದರಂತೆ. ಕೊನೆಗೆ ಆ ಹಸ್ತಪ್ರತಿ ಎಲ್ಲಿ ಹೋಯಿತೋ ತಿಳಿಯದು.

## ೩.೨. ನಾಟಕ:

ಸಂಸರು ಪ್ರಸಿದ್ಧವಾಗಿರುವುದು ಐತಿಹಾಸಿಕನಾಟಕಗಳ ರಚನೆಯಿಂದ. ಅವರು ಕೇವಲ ಐತಿಹಾಸಿಕ ನಾಟಕಗಳನ್ನು ಬರೆದಿದ್ದಾರೆ ಎಂದು ಕೆಲವರು ಭಾವಿಸಿದ್ದಾರೆ. ಆದರೆ ಅವರು ಸಾಮಾಜಿಕ ಅಥವಾ ಬೇರೆ ವಸ್ತುಗಳನ್ನುಳ್ಳ ನಾಟಕಗಳನ್ನು ಬರೆದಿರುವುದರ ಉಲ್ಲೇಖಗಳು ದೊರೆಯುತ್ತವೆ. ಸಂಸರು ಒಮ್ಮೆ ಧಾರವಾಡಕ್ಕೆ ಬಂದಾಗ ಪಂಡಿತ ತಾರಾನಾಥರ 'ಪ್ರೇಮ' ಪತ್ರಿಕೆಯ ವಿಶೇಷ ಸಂಚಿಕೆಯೊಂದಕ್ಕೆ (ಏಕಾಂಕ ನಾಟಕಗಳ ಸಂಪುಟಕ್ಕೆ) 'ಅಸತಿ' ಎಂಬ ನಾಟಕವನ್ನು ಕೇವಲ ಒಂದೇ ದಿನದಲ್ಲಿ ರಚಿಸಿಕೊಟ್ಟರೆಂದು ತಿಳಿದು ಬರುತ್ತದೆ. ಸಂಸರ ಕೃತಿಗಳ ಪಟ್ಟಿಯಲ್ಲಿ 'ಲಾಲಿ' ಮತ್ತು 'ಮಮ್ಮಲ' ಎಂಬ ಮತ್ತೆರಡು ಕೃತಿಗಳ ಉಲ್ಲೇಖವಿದ್ದು, ಸಂಸರು ಇವನ್ನು Not Historical ಎಂದು

ಕರೆದಿದ್ದಾರೆ. ಮತ್ತು ಈ ನಾಟಕಗಳನ್ನು ಅವರು ಬಿ. ಶ್ರೀನಿವಾಸ ಅಯ್ಯಂಗಾರರ ಬಳಿ ಕೊಟ್ಟಿರುವುದಾಗಿ ಉಲ್ಲೇಖಿಸಿದ್ದಾರೆ. ಆದರೆ ಇಂದು ಅವೂ ಕೂಡ ಉಪಲಬ್ಧವಿಲ್ಲ. ಅವು ದೊರೆತಿದ್ದರೆ ಸಂಸರ ಸಾಮಾಜಿಕ ನಾಟಕ ರಚನೆಯ ಸಾಮರ್ಥ್ಯದ ಅರಿವಾಗುತ್ತಿತ್ತು.

ಸಂಸರು ಬರೆದ ಆರು ಐತಿಹಾಸಿಕ ನಾಟಕಗಳಲ್ಲಿ 'ಸುಗುಣ ಗಂಭೀರ', 'ವಿಗಡವಿಕ್ರಮರಾಯ', 'ಬಿರುದಂತೆಂಬರಗಂಡ' ಇವು ಮೊದಲು ಪ್ರಕಟವಾಗಿದ್ದವು. ಇವನ್ನೆಲ್ಲ ಒಟ್ಟಿಗೆ ಸೇರಿಸಿ ಕರ್ನಾಟಕ ನಾಟಕ ಅಕಾಡೆಮಿಯವರು 'ಸಂಸನಾಟಕಗಳು' ಎಂಬ ಹೆಸರಿನಲ್ಲಿ ೧೯೮೮ರಲ್ಲಿ ಹೊರ ತಂದಿದ್ದಾರೆ. ಈ ಆರು ನಾಟಕಗಳನ್ನು ಜಿ.ಪಿ. ರಾಜರತ್ನಂ 'ಸಂಸನಾಟಕ ಚಕ್ರ' ಎಂದು ಅರ್ಥವತ್ತಾಗಿ ಕರೆದಿದ್ದಾರೆ. ಮೈಸೂರು ಅರಸು ಮನೆತನಕ್ಕೆ ಸಂಬಂಧಿಸಿರುವ ಈ ಆರು ನಾಟಕಗಳಲ್ಲಿ ಮೊದಲನೆಯ ಎರಡು ಅರಸರ ಬಿರುದಿಗೆ ಸಂಬಂಧಿಸಿದುವು. ಉಳಿದ ನಾಲ್ಕು ರಣಧೀರನಿಗೆ ಸಂಬಂಧಪಟ್ಟವುಗಳು. ಸಂಸರ ದೃಷ್ಟಿಯಲ್ಲಿ ರಣಧೀರ ಮೈಸೂರು ರಾಜ್ಯವನ್ನು ಕಾಪಾಡಿದವನು. ಶಕ್ತಿತ್ರಯಗಳಾದ ಪ್ರಭುಶಕ್ತಿ, ಮಂತ್ರ ಶಕ್ತಿ ಮತ್ತು ಉತ್ಸಾಹಶಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಈ ನಾಟಕಗಳನ್ನು ರಚಿಸಲಾಗಿದೆ. ಪ್ರಜೆಗಳ ಹಿತ ಕಾಪಾಡುವ ಆದರ್ಶಪ್ರಭುವಾಗಿ ರಣಧೀರನನ್ನು ಕೇಂದ್ರವಾಗಿಟ್ಟುಕೊಂಡು ಸಂಸರು ಈ ನಾಟಕಗಳನ್ನು ರಚಿಸಿರುತ್ತಾರೆ.

ಸಂಸರು ತಮ್ಮ ಸಮಕಾಲೀನ ಸಾಮಾಜಿಕ ನಾಟಕಕಾರರಾದ ಕೈಲಾಸಂ, ಶ್ರೀರಂಗರನ್ನು ಅನುಸರಿಸದೇ ಬೇರೆ ಹಾದಿ ತುಳಿದರು. ಐತಿಹಾಸಿಕ ನಾಟಕಗಳನ್ನು ಬರೆದರು. ಇದಕ್ಕೆ ಅವರಿಗೆ ಆಗ ಯಾವ ಮಾದರಿಯೂ ಎದುರಿಗೆ ಇದ್ದಿರಲಿಲ್ಲ. 'ಆನೆ ನಡೆದುದೆ ಮಾರ್ಗಂ' ಎಂಬಂತೆ ಐತಿಹಾಸಿಕ ನಾಟಕಗಳಿಗೆ ತಮ್ಮದೇ ಆದ ಒಂದು ರೂಪವನ್ನು ಕೊಟ್ಟರು. ಚರಿತ್ರೆಯನ್ನು ಅದರ ಎಲ್ಲ ಮುಖಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಿದರು. ಅದ್ಭುತವಾದ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಪಡಿಸಿದರು. ಸಂಸರು, ಸಂಸ್ಕೃತ ಹಾಗೂ ಇಂಗ್ಲೀಷ್‌ಭಾಷೆಗಳ ನಾಟಿಕಗಳನ್ನು ಅಭ್ಯಸಿಸಿರಬಹುದಾದರೂ ಕನ್ನಡದಲ್ಲಿ ಅವನ್ನು ಯಥಾವತ್ತಾಗಿ ಅನುಸರಿಸಿಲ್ಲ. ಸೂತ್ರಧಾರನ ಪ್ರವೇಶ ಮಾಡಿಸಿದರೂ ಯಾವ ನಾಟಕದಲ್ಲಿಯೂ ಪೂರ್ಣ ಪ್ರಮಾಣದಲ್ಲಿ ಅವನನ್ನು ಬಳಸಿಕೊಂಡಿಲ್ಲ. ಸಂಸರ ಇನ್ನೊಂದು ವೈಶಿಷ್ಟ್ಯವೆಂದರೆ ನಾಟಕವನ್ನು ಅಂಕ ದೃಶ್ಯಗಳನ್ನಾಗಿ ವಿಂಗಡಿಸಿಕೊಳ್ಳದೇ ಬಿಡಿಬಿಡಿಯಾದ ಪ್ರವೇಶಗಳನ್ನು ಕಲ್ಪಿಸಿಕೊಂಡುದು. ಹೀಗೆ ತಾವೇ ಒಂದು ಮಾದರಿಯನ್ನು ಸೃಷ್ಟಿಸಿಕೊಂಡಿದ್ದರೂ ಐತಿಹಾಸಿಕ ವಸ್ತುವಿನ ಗಾಂಭೀರ್ಯಕೆಡಿಸದೇ ಕಲಾತ್ಮಕವಾಗಿ ಅವನ್ನು ನಾಟಕರೂಪದಲ್ಲಿ ನಿರೂಪಿಸಿದ ಶ್ರೇಯಸ್ಸು ಸಂಸರದ್ದು. ೧೯೨೦ ರ ಸುಮಾರಿಗೆ, ಎ.ಆರ್. ಕೃಷ್ಣಶಾಸ್ತ್ರಿಗಳು ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿಸಿದ ಲೇಖನವೊಂದು ಸಂಸರ ಐತಿಹಾಸಿಕ ನಾಟಕಗಳಿಗೆ ಪ್ರೇರಣೆ ನೀಡಿರಬಹುದೆಂದು ಊಹಿಸಲಾಗಿದೆ.

ಇನ್ನು ಮುಂದೆ ಸಂಸರ ಉಪಲಬ್ಧ ಐತಿಹಾಸಿಕ ನಾಟಕಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವೇಚಿಸಲಾಗಿದೆ.

## ೩.೨.೧ ಭಾಷೆ:

ಸಂಸರು ಕಟ್ಟುನಿಟ್ಟಾಗಿ ಯಾವ ಮಾದರಿಯನ್ನೂ ಅನುಸರಿಸದೇ ತಮಗೆ ಅನುಕೂಲವೆನ್ನಿಸುವ ರೀತಿಯಲ್ಲಿ ನಾಟಕಗಳನ್ನು ರಚಿಸಿದರು. ನಾಟಕಗಳಿಗಾಗಿ ಅವರು ಮೈಸೂರು ಅರಸರ ಚರಿತ್ರೆಯನ್ನು ಬಳಸಿಕೊಂಡರು. ಆಕರ ಸಾಮಗ್ರಿಗಳಿಗಗಿ ಎಲ್ಲ ಬಗೆಯ ಶೋಧ ನಡೆಸಿದ್ದನ್ನು ಈ ಹಿಂದೆಯೇ ವಿವರಿಸಲಾಗಿದೆ. ವಸ್ತುವಿನಂತೆಯೇ ಅವರು ಆ ಕಾಲದ ಭಾಷೆಗೂ ಅಷ್ಟೇ ಮಹತ್ವಕೊಟ್ಟರು. ದಾಖಲೆಗಳಲ್ಲಿ ಅಡಗಿರುವ ಭಾಷಾ ರೂಪಗಳನ್ನು ಪ್ರಯತ್ನಪಟ್ಟು ರೂಢಿಸಿಕೊಂಡರು. ನಿರೂಪಗಳಲ್ಲಿರುವ ಭಾಷಾವ್ಯತ್ಯಾಸಗಳನ್ನು ಬಹುಸೂಕ್ಷ್ಮವಾಗಿ ಗಮನಿಸಿ ಬಳಸಿಕೊಂಡಿದ್ದಾರೆ. ರಾಜಮಹಾರಾಜರ ಹಾಗೂ ಮೇಲ್ವರ್ಗದವರ ಭಾಷೆ , ಅವರ ಅಂತಸ್ಥಿಗೆ ತಕ್ಕಂತೆ ಪ್ರೌಢವಗಿ ಮೂಡಿಬಂದಿದ್ದರೆ, ಕಾವಲುಗಾರರು, ಹಳ್ಳಿಯವರು ಮುಂತಾದವರ ಭಾಷೆ ಸಹಜವಾಗಿ ಆಡುಮಾತಿನದಾಗಿದೆ; ದೇಸೀ ನುಡಿಗಟ್ಟುಗಳಿಂದ ಕೂಡಿದೆ. ಅತೀ ಚುರುಕಾದ ಸಂಭಾಷಣೆಗಳಲ್ಲಿ ವ್ಯಕ್ತಿಯ ಗುಣಸ್ವಭಾವಗಳು ಸ್ವಯಂ ವೇದ್ಯವಾಗುವಂತಿವೆ. ಭಾಷೆ ಕ್ರಿಯಾತ್ಮಕಗೊಳ್ಳುವ ವಿಶಿಷ್ಟ ಬಗೆಯನ್ನೂ ನಾವು ಸಂಸರಲ್ಲಿ ಕಾಣಬಹುದಾಗಿದೆ. ಭಾಷೆ, ಅನೇಕ ಸಾಮಾಜಿಕ ಅಂಶಗಳನ್ನು ಪ್ರತಿನಿಧಿಸುತ್ತದೆ ಎಂಬುದನ್ನೂ ಭಾಷೆಯಲ್ಲಿ ವರ್ಗಪ್ರಜ್ಞೆ ಯಾವಾಗಲೂ ಜಾಗೃತವಾಗಿರುತ್ತದೆಂಬುದನ್ನೂ ಸಂಸರ ನಾಟಕಗಳಿಂದಲೂ ಮನಗಾಣಬಹುದು. ಉದಾಹರಣೆಗೆ, 'ಬೆಟ್ಟದಅರಸು'

ನಾಟಕದಲ್ಲಿ ಆನೆವಾಳಗ್ರಾಮದ ನಾಡಿಗ ಕಗ್ಗಯ್ಯ ಮಹಾರಾಜರನ್ನು ಭೆಟ್ಟಿಯಾಗಿ ತನ್ನ ಸಮಸ್ಯೆಯನ್ನು ನಿವೇದಿಸಿಕೊಳ್ಳಬೇಕು ಎಂದು ಅರಮನೆಗೆ ಬರುತ್ತಾನೆ. ಕಾವಲುಗಾರರು ಒಳಗೆ ಬಿಡದೇ ತೊಂದರೆ ಕೊಡುತ್ತಾರೆ. ಅವನ ಗಲಾಟೆ ಕೇಳಿ ದಳವಾಯಿ ಬೆಟ್ಟದ ಅರಸು ಅವನನ್ನು ಒಳಬಿಡಹೇಳಿ, ವಿಚಾರಿಸುತ್ತಾನೆ. ಆಗ,

**ಕಗ್ಗಯ್ಯ:** (ಕಯ್ಮುಗಿಯುತ್ತ, ಅದೃಢಸ್ವರದಿಂದ) ಶಿವ ನಿಮ್ಮ ಹೊಟ್ಟೆಯನ್ನು ನಿಮ್ಮ ಹೆಂಡತಿ ಮಕ್ಕಳ ಹೊಟ್ಟೆಯನ್ನು ತಣ್ಣಗಿಟ್ಟಿರಲಿ, ನನ್ನಪ್ಪ! ನೀವೇ ದೇವರು, ಮಾಸ್ವಾಮಿ!

**ಬೆಟ್ಟದ ಅರಸು:** ಏನಾಯ್ತು?

**ಕಗ್ಗಯ್ಯ:** ಹಹೌದು. ನೀವು ನಮ್ಮೂರನ್ನ, ಆನೆವಾಳನ್ನ ಬೆಟ್ಟದ ಶಿವನಿಗೆ ಆವೊತ್ತು, ಗರಣದಾಗ ಗುಡಿಯಕೊಡಗೆ ಕೊಟ್ಟಿದ್ದು ಮಾಸ್ವಾಮಿ.

**ಬೆಟ್ಟದ ಅರಸು:** ಆಳುವ ಮಹಾಸ್ವಾಮಿಯವರಿಗೆ ಪುಣ್ಯವಾಗಬೇಕೆಂದು ಮಹಾಸನ್ನಿಧಾನದ ಅಭಿಮತಿ ಪೂರ್ವಕವಾಗಿ ಆನೆವಾಳ ಗ್ರಾಮವನ್ನು ಹಾಗೆ ಧಾರೆಯೆರೆದು ಸಮರ್ಪಿಸಿ ದೇವದಾಯ ಮಾಡಿದೆವಹುದು.

**ಕಗ್ಗಯ್ಯ:** ಆ ವೊತ್ತಿನಿಂದ ನಮ್ಮೂರ ದೊಡ್ಡದೊಡ್ಡ ಬಂಡವಳದ ಬಲ್ಲಿದ ಕುಳಗಳೆಲ್ಲಾ ಶಿವನಗುಡಿಗೆ ವಾರದ ದಿವಸ ಒಂದುಕಾಳನ್ನೂ ಕೊಡರು ಮಾಸ್ವಾಮಿ; ಬಡವರಿಗೂ ಆ ನನ್ನ ಮಕ್ಕಳಿಗೂವೆ ಹೇಳಿಕೊಟ್ಟು ಕೊಡಲಿಯೀಸರು ಮಾಸ್ವಾಮಿ.

**ಬೆಟ್ಟದ ಅರಸು:** ಅದೇಕೆ?

**ಕಗ್ಗಯ್ಯ:** ನಾವು ಕೊಡದಿದ್ದರೆ ಶಿವ ಉಪಾವಾಸ ಬಿದ್ದು ಸತ್ತು ಹೋಗಲಿಕ್ಕಿಲ್ಲ. ಶಿವನಿಗೆ ಹಸಿವು ಬಾಯಾರಿಕೆ ಏನೂ ಇಲ್ಲ. ನಾವೇ ನಮ್ಮ ಹೊಟ್ಟೆ ತಣ್ಣಗಾಗುವ ಹಾಂಗೆ ಚೆಂದಾಗಿ ಹೊಟ್ಟೆ ತುಂಬ ಉಂಡರೆ ಶಿವನಿಗೆ ಹೊಟ್ಟೆ ತಣ್ಣಗಾಗಿ ಹೊಟ್ಟೆತುಂಬಿ ತೇಗು ಬಂದು ಸಂತೋಷವಾಗಿ ಶಿವ ನಮ್ಮನ್ನು ಹೊಗಳಿ ಹರಸುತ್ತಾನೆ, ಎನ್ನುತ್ತಾರೆ ಮಾಸ್ವಾಮಿ.

**ಸಮಸ್ತರೂ:** (ನಕ್ಕು ಬಿಡುವರು)……

ಈ ಮೇಲಿನ ಅವತರಣಿಕೆಯಲ್ಲಿ ಕಗ್ಗಯ್ಯನ ಮಾತಿನಲ್ಲಿ ಮಾಸ್ವಾಮಿ, ಗರಣ, ಕೊಡಗೆ, ಆವೊತ್ತು, ಕುಳ, ಮಕ್ಕಳಿಗೊವೆ, ಸಂತೋಷ, ಉಪಾಸ ಇತ್ಯಾದಿ ಗ್ರಾಮ್ಯಶಬ್ದಗಳಿದ್ದು ಅವನ ಮಾತಿನ ಶೈಲಿ ಒಟ್ಟಾರೆ ದೇಸಿಯಾಗಿದ್ದರೆ, ಬೆಟ್ಟದ ಅರಸುವಿನ ಮಾತುಗಳು ಇದಕ್ಕೆ ವ್ಯತಿರಿಕ್ತವಾಗಿದ್ದು, ಸಂಸ್ಕೃತ ಭೂಯಿಷ್ಠ ಶಿಷ್ಟ ಶೈಲಿಯನ್ನು ಹೋಲುತ್ತವೆ. ದಳವಾಯಿಯಾದ ಅವನು ತನ್ನ ಅಂತಸ್ಥಿಗೆ ತಕ್ಕಂತೆ ಪ್ರೌಢಭಾಷೆಯನ್ನೇ ಬಳಸುತ್ತಾನೆ. ಸಂಸರು ಈ ಭಾಷೆಯಲ್ಲಿ ವರ್ಗವ್ಯತ್ಯಾಸವನ್ನುಒ ನಾಟಕದುದ್ದಕ್ಕೂ ನಡೆಸಿಕೊಂಡು ಹೋಗಿದ್ದಾರೆ. ದೇಸೀ ಶೈಲಿಗೆ ಇನ್ನೊಂದು ಉದಾಹರಣೆಯನ್ನು 'ಸುಗುಣಗಂಭೀರ' ನಾಟಕದಂದ ಕೊಡಬಹುದು. ೧೦ನೆಯ ಪ್ರವೇಶದಲ್ಲಿ ಕೋಟೆಯ ದ್ವಾರವನ್ನು ಕಾವಲುಗಾರರು ಕಾಯುತ್ತಿರುವ ಸನ್ನಿವೇಶ. ಬೇಸರ ಕಳೆಯಲು ಅವರು ಕೋಟೆಯ ಬಾಗಿಲು ಹೊಸ್ತಿಲ ಮೇಲೆ ಕುಳಿತು ಮಾತನಾಡ ಬಯಸುತ್ತಾರೆ.

**ಮೆಳ್ಳು:** ಅಲ್ಲಿ ನೋಡು; ಕೋಟೆಯ ಬಾಗಿಲ ಹೊಸತಿಲ ಮೇಗೆ……

**ಮಿನುಕ:** ಹೌದುಕಣ, ಅಯ್ಯಪ್ಪಣ್ಣಾ! ಅಲ್ಲಿ ಕುಳ್ಳಿರವ ಬಾರ

**ನಾಲ್ವರೂ:** (ಹೋಗಿ ಕುಳಿತುಕೊಳ್ವರು)

**ಬೋಡ:** (ಕಾಲ್ಗಳನ್ನು ನೇವರಿಕೊಳ್ಳುತ್ತ ಅಗುಳಿಸಿ) ನಿದ್ದೆ ಬಂದರೆ ಮಾಡುವುದೇನಿರೆಲೊ? ನನಗೆ ತೂಂಕಡ ಬರುತ್ತದೆ.

**ಮಿನುಕ:** ನಿಮ್ಮಂಥ ಮುದುಕರ್ಗೆ ಕಾಲ್ನಿಂತರೆ, ಕಣ್ಗೆ ಮತ್ತು ಬರುತ್ತದೆ. ಅದಕೆ ಯಾರೇನ್ ಮಾಡಿಯಾರು?

**ಬೋಡ:** ಏನಿರಲೋ, ಹುಡುಗರು ಯಾರಾದರೂ ಒಂದು ಪದವನ್ನು ಹಾಡಿರೆಲೊ ಕೇಳುವ.

**ಮಿನುಕ: (**ಸಂತೋಷದಿಂದ) ಅಯ್ಯಪ್ಪಣ್ಣಾ! ದಿಟಕಣ, ಬೋಡಣ್ಣಾ! ಎಲೇ ಮೆಳ್ಳೆ, ಒಂದು ಪದವನ್ನು ಭಾಪಾಗಿ ಹೇಳ, ಕೇಳುವ (ಬೋಡನನ್ನು ಕುರಿತು) ನೀನದವ್ನ ಕೇಳಲಿಲ್ಲವಾ ಅಣ್ಣ! ಮೊನ್ನೆ ಮೆಳ್ಳೆ ಹಾಡುತ್ತಿದ್ದ; ಚಿಕ್ಕರಸರು ಆಗ ಹಿನ್ದೆಯೇ ನಿಂತಿದ್ದು ಕೇಳಿ, ಈ ನಮ್ಮ ಮೆಳ್ಳೆಯನ್ನು ಭಲರೇಗಿರಿಯೇರಿಸಿಬಿಟ್ಟರು! ಎಲ್ಲಿ ಮೆಳ್ಳೆ ಚೆನ್ದವಾಗಿ ಹೇಳಬೇಕು!

ಹೀಗೆ ಸಂಪೂರ್ಣವಾಗಿ ಸಹಜ ಆಡುಮಾತಿನಲ್ಲಿಯೇ ಇಡೀ ಸನ್ನಿವೇಶ ಹೆಣೆಯಲ್ಪಟ್ಟಿದೆ.

ಸಂಸರು ನಮ್ಮ ನಾಟಕಗಳಲ್ಲಿ ಭಾಷೆಯನ್ನು ದುಡಿಸಿಕೊಳ್ಳುವ ರೀತಿ ಅದ್ಭುತವಾದುದು. ನಾಟಕೀಯತೆದೊಂದಿಗೆ ಸಂದರ್ಭದ ನಿರ್ವೀರ್ಯತೆಯ ಸಂಕೇತವಾಗಿಯೂ ಅವರು ಭಾಷೆಯನ್ನು ಬಳಸಿಕೊಂಡಿದ್ದಾರೆ. 'ವಿಗಡ ವಿಕ್ರಮರಾಯ' ನಾಟಕದಲ್ಲಿ ಮೊದಲ ಪ್ರವೇಶದಲ್ಲಿ ಇಮ್ಮಡಿರಾಜ ಒಡೆಯ, ಮತ್ತೆ ಪ್ರಭುಶಕ್ತಿಯನ್ನು ಕ್ರೋಢೀಕರಿಸಿಕೊಂಡು ಅಹಂಕಾರದಿಂದ ಬೀಗುತ್ತ ಸರ್ವಾಧಿಕಾರಿಯಂತೆ ವರ್ತಿಸುವ ವಿಕ್ರಮರಾಯನನ್ನು ರಾಜವೇಷ ತೊಟ್ಟು ಎದುರಿಸುವ ಸನ್ನಾಹ ಮಾಡುತ್ತಾನೆ. ದಳವಾಯಿ ವಿಕ್ರಮರಾಯನ ಹರ್ಮ್ಯಕ್ಕೆ ಬಂದು ರಾಜ್ಯದ ಲೆಕ್ಕ ಪತ್ರಗಳನ್ನು ಕೇಳುತ್ತಾನೆ. ವಿಕ್ರಮರಾಯ ಅರಸನಿಂದ ಇದನ್ನು ನಿರೀಕ್ಷಿಸಿರಲಿಲ್ಲ. 'ನಮಗಿದು ಅರ್ಥವಾಗುತ್ತಿಲ್ಲ' ಎನ್ನುತ್ತಾನೆ. ಆಗ,

**ಮಹಾರಾಜ;** ಏನು?

**ವಿಕ್ರಮರಾಯ:** ನಿನ್ನ ಇಂದಿನ ಈ ವೇಷವಿದು. ಆ ವೃದ್ಧ ರಂಗಜೋಯಿಸರೇನಾದರೂ ತಪ್ಪಿ, ಈ ಪೊತ್ತು ಮಹಾನವಮಿಯ ಪಾಡ್ಯಮಿಯೆಂದು ನಿನಗೆ ಭ್ರಮೆಯನ್ನು ಹುಟ್ಟಿಸಿಟ್ಟರೋ?

**ಮ:** ಹುಂ

**ವಿ:** ಮತ್ತೆ. ಆ ಪೊಡ್ಡೋಗಲದ ಉಡುಗೆ ತೊಡುಗೆಗಳು ಪಟ್ಟದ ಕತ್ತಿಯು, ಶಿಖಾಸರವು – ಮುದ್ರೆಯುಂಗರವೂ ಹೀಗೆ ಇಂದೇಕೆ? ಇವೆಲ್ಲವನ್ನೂ ಬೊಕ್ಕಸದಿಂದ ನಿನಗೆ ತೆಗೆದಿತ್ತವರಾರು? ನಮಗೆ ಅರ್ಥವಾಗಿಲ್ಲ.

**ಮ:** ದಳವಾಯಿ ಮಹಾಶಯರೆ, ನಮ್ಮಿದಿರಲ್ಲಿಯಾದರೂ ನಮಗೆ ಸಲ್ಲತಕ್ಕ ಗೌರವ ಮರ್ಯಾದೆಗಳನ್ನರಿತು ನೀನು ನಡೆದುಕೊಳ್ಳಬೇಕೆಂದು ನಾವಾಗಿ ನಿರವಿಸೋಣವೇ?

**ವಿ:** (ನಕ್ಕು) ಹಾಗೆಂದರೆ?

**ಮ:** (ತನ್ನದೆಯನ್ನು ಮುನ್ನೀಡಿ, ಮೊಗವೆತ್ತಿ, ಧರ್ಮದಿಂದ) ನನ್ನ ವಿಷಯವನ್ನು ಏಕವಚನದಲ್ಲಿ ಹೇಳಿಕೊಳ್ಳುತ್ತ ನಾವಾರೆಂಬುದನ್ನು ಮರೆಯದಿರು.

**ವಿ:** (ನೆಟ್ಟನೆ ಕುಳಿತು ಕೌತುಕದಿಂದ) ನೀವಾರು?

**ಮ:** ನಾವಾರು! (ಥಟ್ಟನೆ ಪಾರ್ಶ್ವಕ್ಕೆ ತಿರುಗಿ, ವಂದಿಮಗಧರತ್ತ ನೋಡುವನು)

**ವಂದಿಮಾಗಧರು:** (ಕಯ್ಯೆತ್ತಿ) ಜಯ ಜಯ ಮಹಾರಾಜ! ಜಯ ಜಯ ಮಹಾಸ್ವಾಮಿ!

ಸ್ವಸ್ತಿಶ್ರೀ ಮತ್ಸಶ್ಚಿಮರಂಗನಾಥ ಪಾದಾರವಿಂದ ಮಧುಕರಾಯಿತ ಚೆತ್ತ!
ಮತ್ತರಿರಿಪುಷಂಡ ಖಣ್ಡನೋದ್ದಂಡ ದೋರ್ಹಂಡ!
ಅರ್ಥಿಜನೇಪ್ಸಿ ತಾರ್ಥದಾನಶೌಂಡ!
ಅಂಗನಾಜನ ಕುಸುಮಕೋದಣ್ಡ ……………..

ಇತ್ಯಾದಿಯಾಗಿ ರಾಜನ ಬಿರುದು-ಬಾವಲಿಗಳನ್ನು ಹೊಗಳುತ್ತಾರೆ. ವಂದಿಮಾಗಧರಿಂದ ತಾನಾರೆಂಬುದನ್ನು ತಿಳಿಸುವ ಮಹಾರಾಜನ ದುಃಸ್ಥಿತಿ ಇಲ್ಲಿ ವಿಡಂಬನೆಗೆ, ಅಪಹಾಸ್ಯಕ್ಕೆ ಗುರಿಯಾದುದನ್ನು ಗಮನಿಸಬೇಕು.

## ೩.೧.೭ ಪಾತ್ರ ಚಿತ್ರಣ:

ಸಂಸರ ನಾಟಕಗಳ ವಸ್ತುವಿನ ಹರವು ವಿಸ್ತಾವಾದುದು. ಅದರಂತೆ ಪಾತ್ರ ಪ್ರಪಂಚವೂ ದೊಡ್ಡದು. ರಾಜ ಮಹಾರಾಜರಂತಹ ಪ್ರತಿಷ್ಠಿತ ಪಾತ್ರಗಳನ್ನಲ್ಲದೇ ಕಾವಲುಗಾರರು ವರ್ತಕರು, ಹಳ್ಳಿಯವರು, ಕಾಲಾಳುಗಳು, ವೇಶ್ಯೆಯರು ಹೀಗೆ ಸಾಮಾನ್ಯ ಜನರನ್ನು ಸಂಸರು ತಮ್ಮ ನಾಟಕಗಳಲ್ಲಿ ತಂದಿದ್ದಾರೆ. ಅವರಲ್ಲಿ ಘರ್ಷಣೆಗಳನ್ನು ಕಲಾತ್ಮಕವಾಗಿ ಹಿಡಿದಿಟ್ಟಿದ್ದಾರೆ. ರಣಧೀರ, ನಿರೀಶ ಮುಂತಾದ ಉದಾತ್ತರು, ಕರುವಿಯನ್ ವಿಕ್ರಮರಾಯ ಮುಂತಾದ ದುಷ್ಟರು ಹೀಗೆ ಕಪ್ಪು-ಬಿಳುಪಿನ ಪಾತ್ರಗಳನ್ನು ಸಂಸರು ಚಿತ್ರಿಸಿದ್ದರೂ ಕೆಲವಡೆ ಪಾತ್ರಗಳ ಅಂತರಂಗದ ಒಳತೋಟಿಯನ್ನು ಹಿಡಿದಿಡುವಲ್ಲಿ ಸಮರ್ಥರಾಗಿದ್ದಾರೆ. ಸಂಸರ ಸ್ತ್ರೀ ಪಾತ್ರಗಳೂ ಅಷ್ಟೇ ಮಹತ್ವದವಾಗಿದೆ. ತಿಮ್ಮಾಜುಮ್ಮಣಿ, ಮುದ್ದಾಜಮ್ಮಣ್ಣಿ, ಮಾದೇವಮ್ಮಣ್ಣಿ, ಅಂಬಿಕೆ ಮುಂತಾದವರು ರಾಜವಂಶದ ಸ್ತ್ರೀಯರಾದರೆ, ತೇಜಸ್ವಿನಿ, ಕಾಡಿಣಿ, ದೊಡ್ಡಮ್ಮ ಮುಂತಾದ ಸಾಮಾನ್ಯ ಸ್ತ್ರೀಯರೂ ಅಲ್ಲಿದ್ದಾರೆ. ಹೆಣ್ಣಿನ ಪ್ರೇಮ, ಛಲ ಹಾಗೂ ಸೇಡುಗಳನ್ನು ಸಂಸರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಅಂಬಿಕೆ, ತೇಜಸ್ವಿನಿ ಇವರ ಮಾನಸಿಕ ದ್ವಂದಗಳೂ ಇಲ್ಲಿ ಅಷ್ಟೇ ಮುಖ್ಯದ್ದೆನಿಸಿವೆ. ಹೆಣ್ಣನ್ನು ರಾಜಕೀಯ ಚದುರಂಗದಲ್ಲಿ ಪ್ರಮುಖದಾಳವನ್ನಾಗಿ ಬಳಸಿಕೊಳ್ಳುವ ತಂತ್ರವನ್ನು ಆ ಕಾಲದಲ್ಲಿಯೇ ಸಂಸರು ಪರಿಣಾಮಕಾರಿಯಾಗಿ ಪ್ರಯೋಗಿಸಿದ್ದಾರೆ. ಸಂಸರು ಚಿತ್ರಿಸಿದ ಸ್ತ್ರೀ ಪಾತ್ರಗಳು ಸಂಕಷ್ಟಗಳನ್ನು ಎದುರಿಸಿ ಗಟ್ಟಿಯಾಗುತ್ತಾ ಹೋಗುವ ಗಟ್ಟಿಮುಟ್ಟಾದ ಪಾತ್ರಗಳಾಗಿವೆ. ಸಂಸರ ಅನೇಕ ಪಾತ್ರಗಳು ಒಂದಕ್ಕಿಂತ ಹೆಚ್ಚು ನಾಟಕಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಸಂಸರು ರಣಧೀರನನ್ನು ಆದರ್ಶ ರಾಜನನ್ನಾಗಿ ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿಯೇ ಅವನ ಉದಯ, ಉತ್ಕರ್ಷಗಳಿಗೆ ಹೆಚ್ಚಿನ ಗಮನ ನೀಡಿದ್ದಾರೆ. ರಣಧೀರನಿಗೆ ವೈದೃಶವಾಗಿ ವಿಕ್ರಮರಾಯನ ಪಾತ್ರಬಂದಿದೆ. ಅದಕ್ಕಾಗಿ ಅವನನ್ನು ಖಳನಾಯಕನನ್ನಾಗಿ ಚಿತ್ರಿಸುವ ಪ್ರಯತ್ನ ಮಾಡಲಾಗಿದೆ.

## ೩.೨.೩ ಸನ್ನಿವೇಶ ನಿರ್ಮಾಣ:

ಸನ್ನಿವೇಶಗಳ ನಿರ್ಮಾಣದಲ್ಲಿಯೂ ಸಂಸರದ್ದು ಎತ್ತಿದ ಕೈ. ಕ್ರಿಯಾತ್ಮಕವಾದ ಭಾಷಾ ಸಾಮರ್ಥ್ಯದಿಂದಾಗಿಯೇ ಅವರ ನಾಟಕಗಳಲ್ಲಿ ನಾಟಕೀಯತೆ ಅಪೂರ್ವವಾದ ರೀತಿಯಲ್ಲಿ ಮೂಡಿಬಂದಿದೆ. 'ಬೆಟ್ಟದರಸು' ನಾಟಕದಲ್ಲಿ ಯುವರಾಜ ರಾಜ ಒಡೆಯ ಇನ್ನೂ ಬಾಲಕನಾಗಿದ್ದ ಸಂದರ್ಭ; ಸಿಂಹಾಸನವನ್ನು ನೋಡುತ್ತಲೇ ಅದನ್ನು ಹತ್ತಬೇಕೆಂಬ ಬಯಕೆ ಅವನಲ್ಲಿ ಮೂಡುತ್ತದೆ. ಯಾರೂ ಇಲ್ಲದ್ದನ್ನು ನೋಡಿ ಅದರ ಮೇಲೆ ಕುಳಿತುಕೊಳ್ಳಲು ಪ್ರಯತ್ನಿಸುತ್ತಾನೆ. ಮುಂದಿನ ಮೆಟ್ಟಲುಗಳನ್ನು ಕಳಚಿ ಇಟ್ಟಿದ್ದರಿಂದ ಜಿಗಿದು ಹತ್ತಲು ಪ್ರಯತ್ನಿಸುತ್ತಾನೆ. ಎಷ್ಟು ಬಾರಿ ಪ್ರಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ. ಅವನ ಈ ಕಾರ್ಯವನ್ನು ತಾಯಿ ತಿಮ್ಮಾಜಮ್ಮಣ್ಣಿ ಅತ್ಯಂತ ಆಸೆಯಿಂದ ಮರೆಯಲ್ಲಿ ನಿಂತು ನೋಡುತ್ತಿರುತ್ತಾಳೆ. ಯುವರಾಜನಿಗೆ ಕೊನೆಗೂ ಸಿಂಹಾಸನವೇರಲು ಸಾಧ್ಯವಾಗುವುದಿಲ್ಲ ಯುವರಾಜನ ಪ್ರಯತ್ನ, ಮಹಾರಾಣಿಯ ಆಸೆ-ನಿರಾಸೆಗಳು ಈ ಭಾಗದಲ್ಲಿ ಬಹುಸುಂದರವಾಗಿ ಚಿತ್ರಿತವಾಗಿವೆ. ಮುಂದೆಯೂ ಕೂಡ ರಾಜೊಡೆಯ ತನ್ನ ಹಕ್ಕು-ಕರ್ತವ್ಯಗಳನ್ನು ಅರಿತು ಪ್ರಭುಶಕ್ತಿಯಿಂದ ವಿಕ್ರಮರಾಯನನ್ನು ಎದುರಿಸುವ ಹೊತ್ತಿಗೆ ತಡವಾಗಿರುತ್ತದೆ. ವಿಕ್ರಮರಾಯನ ಕುತಂತ್ರದಿಂದ ಅವನು ಮರಣವನ್ನಪ್ಪುವಂತಾಗುತ್ತದೆ. ಈ ಹಿನ್ನೆಲೆಯಲ್ಲಿಯೂ ಸಿಂಹಾಸನವನ್ನೇರಲು ಪ್ರಯತ್ನಿಸುವ ಸನ್ನಿವೇಶ ಸಾಕೇಂತಿಕವಾಗಿದೆ. ಇದರಂತೆ 'ವಿಗಡ-ವಿಕ್ರಮರಾಯದಲ್ಲಿ ಚೆನ್ನ, ರಂಗರು ವಿಕ್ರಮರಾಯನನ್ನು ಕೊಲ್ಲುವ ಸನ್ನಿವೇಶ ಇಡೀ ನಾಟಕದಲ್ಲಿಯೇ ಅತ್ಯಂತ ನಾಟಕೀಯವಾದುದು ಮತ್ತು ತೀವ್ರಗತಿಯದು. ವಿಕ್ರಮರಾಯನನ್ನು ಕೊಲ್ಲಲು ಬಂದ ಚನ್ನ, ರಂಗರು ಮರೆಯಲ್ಲಿ ಕುಳಿತುಕೊಂಡು ಅಳಗರಾಜ ಹಾಗೂ ವಿಕ್ರಮರಾಯರ ಮಾತುಗಳನ್ನು ಕೇಳುತ್ತಿರುತ್ತಾರೆ. ಅವರ ಮಾತಿನಿಂದ ಚೆನ್ನ, ರಂಗರನ್ನು, ಹಿಡಿದು ಗುಪ್ತಗೃಹದಲ್ಲಿ ಚಿತ್ರಹಿಂಸೆಗೆ ಗುರಿಪಡಿಸಿ ಗುಟ್ಟನ್ನು ತಿಳಿದುಕೊಳ್ಳಬೇಕೆಂಬ ವಿಷಯ ತಿಳಿಯುತ್ತದೆ. ಇದು ಪ್ರಾಯಶಃ ಅವರ ಕ್ರೋಧವನ್ನು ಇಮ್ಮಡಿಗೊಳಿಸುತ್ತದೆ. ವಿಕ್ರಮರಾಯನು ಮೇಲೆ ಅವರು ಆಕ್ರಮಣ ಮಾಡಿದಾಗ ದೀವಟಿಗೆಯೂ ಆರಿ ಹೋಗಿರುತ್ತದೆ. ರಂಗನನ್ನು ವಿಕ್ರಮರಾಯನು ಕೆಳಕ್ಕೆ ಒತ್ತಿ ಕುತ್ತಿಗೆ ಹಿಚುಕುವುದರಲ್ಲಿರುತ್ತಾನೆ. ಕತ್ತಲಲ್ಲಿ ಸರಿಯಾಗಿ ಕಾಣಿಸದೇ ಚೆನ್ನ 'ರಂಗ ನೀನ್‌ಕೆಳಗೊ ನೀನ್‌ಮೇಲೋ' ಎಂದು ಕೇಳುತ್ತಾನೆ. ರಂಗ ಉಸಿರಿಲ್ಲದ ಅತ್ಯಂತ ಕ್ಷೀಣಸ್ವರದಿಂದ 'ಕೆಳಗೇ! ಕೆಳಗೇ!' ಎಂದು ಉತ್ತರಿಸುತ್ತಾನೆ. ಒಡನೆಯೇ ಚೆನ್ನ ಸ್ವೌಳೆಂದು ಖಡ್ಗಬೀಸಿ ವಿಕ್ರಮನ ತಲೆಯನ್ನು ಕತ್ತರಿಸಿ ಹಾಕುತ್ತಾನೆ. ಈ ಮಹತ್ವದ ಘಟನೆ ನಿಮಿಷಾರ್ಧದಲ್ಲಿ ನಡೆದು ಹೋಗುತ್ತದೆ.

ಇದರಂತೆ 'ಬಿರುದುತೆಂಬರ ಗಂಡ' ದಲ್ಲಿ ಉಮ್ಮತ್ತೂರಿನ ಪಾಳೆಯಗಾತಿ ಮಾದೇವಮ್ಮಣ್ಣಿ ಖಡ್ಗದಿಂದ ಮಹಾರಾಜನ ಉಷ್ಣೀಷವನ್ನು ಹಾರಿಸುವ ಸನ್ನವೇಷದಲ್ಲಿಯೂ ನಾಟಕೀಯತೆ ಗರಿಷ್ಠ ಪ್ರಮಾಣದಲ್ಲಿ ಮೂಡಿಬಂದಿದೆ. 'ಬೆಟ್ಟದಅರಸು' ವಿನಲ್ಲಿ ತಿಮ್ಮಾಜಮ್ಮಣ್ಣಿ ಮತ್ತು ವಿಕ್ರಮರಾಯರ ನಡುವೆ ನಡೆದ ಚಕಮಕಿಯ ಮಾತುಕತೆಯಲ್ಲಿ ವಿಕ್ರಮರಾಯನ ವ್ಯಕ್ತಿತ್ವ ಸ್ಫುಟವಾಗಿ ಮೂಡಿಬಂದಿದೆ. ಕೊನೆಯಲ್ಲಿ ತಿಮ್ಮಾಜಮ್ಮಣ್ಣಿ 'ಗಂಡುದಿಕ್ಕಿಲ್ಲದ ಅಬಲೆಯರಾದ ಹೆಂಗುಸುರೆಂದೇ ಈ ಕಿತವಕಿರಾತರ ಕಟ್ಟಧಟಿನ ಆಟಗಾರಿಕೆ?' ಎಂದು ವಿಕ್ರಮರಾಯನನ್ನು ಪ್ರಶ್ನಿಸಿದಾಗ, ಅವನು ಬಿಲ್ಲುಂಬೆರಗಾಗಿ ಆಕೆಯನ್ನಾಪಾದ ಮಸ್ತಕವಾಗಿ ನೋಡಿ, ನೋಡಿ 'ನೀವು ಹೆಂಗುಸೇನು?' ಎಂದು ಕೇಳುತ್ತಾನೆ. ತಿಮ್ಮಾಜಮ್ಮಣ್ಣಿ 'ಅಯ್ಯೋ!' ಎಂದು ಉದ್ಘರಿಸಿ, ದಡದಡನೆ ಹೊರಟುಹೋಗುತ್ತಾಳೆ. ಅದೇ ರೀತಿ, 'ಮಂತ್ರ ಶಕ್ತಿ'ಯಲ್ಲಿ ಮೊನೆಗಾರ, ದೊಡ್ಡಮ್ಮ ಇವರ ನಡುವಿನ ಸಂಭಾಷಣೆಯು ಸ್ವಾರಸ್ಯಕರವಾಗಿ ಮೂಡಿಬಂದಿದೆ. ಅಲ್ಲಿ ಶೃಂಗಾರಭಾವವು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತದೆ.

## ೩.೨.೪ ಹಾಸ್ಯ:

ಸಂಸರ ನಾಟಕಗಳು ಮೇಲ್ನೋಟಕ್ಕೆ ತೀರ ಗಂಭೀರವಾದವೆಂದು ಅನ್ನಿಸಿದರೂ, ಕೆಲವೆಡೆಯಾದರೂ ಅವರು ಹಾಸ್ಯದ ಸನ್ನಿವೇಶವನ್ನೂ ಜೋಡಿಸಿ ನಾಟಕ ಹೃದ್ಯವಾಗುವಂತೆ ಮಾಡಿದ್ದಾರೆ. 'ಸುಗುಣಗಂಭೀರ'ದಲ್ಲಿ ಸೂರಣ, ಯುವರಾಜ ಇವರ ನಡುವೆ ನಡೆಯುವ

ಸಂಭಾಷಣೆಯಲ್ಲಿ ನವಿರಾದ ಹಾಸ್ಯವಿದೆ. ಅಲ್ಲಿ ಯುವರಾಜನ ಒಡನಾಡಿ ಸೂರಣ ಬೇಕೆಂತಲೇ ಆಶೀರ್ವಾದ ಮಾಡುವ ನೆಪದಿಂದ 'ಹರಿ: ಓಂ' ಎಂದು ಹೇಳಿ ಅಮರಸಿಂಹನ ನಾಮಲಿಂಗಾನುಶಾಸನದ ಪ್ರಥಮ ಶ್ಲೋಕವನ್ನು ರಾಗವಾಗಿ ಹೇಳುತ್ತಾನೆ. ಯುವರಾಜ ಬೆರಗಾಗಿ, ಅದು ಆಶೀರ್ವಚನವಲ್ಲವೆಂದು ಹೇಳಿದರೆ, 'ಆದರೇನು? ಈಗಳಿನ ಕಾಲದ ಅನೇಕರು ಪುರೋಹಿತರು ಇದೇ ಶ್ಲೋಕಕ್ಕೆ ಉದಾತ್ತ, ಅನುದಾತ್ತ ಹೃಸ್ವ, ದೀರ್ಘ, ಪ್ಲುತಗಳನ್ನು ಮನಸ್ಸೀ ಹಾಯ್ಕಿಕೊಂಡು ಪೂರ್ವಪರಗಳಿಗೆಲ್ಲ ಇದನ್ನು ಒಂದೇ ವಿಧವಾಗಿ ಪ್ರಯೋಗಿಸಬಹುದಂತೆ! ನಾನು ಮಾತ್ರ ಅದನ್ನು ರಾಜಾಶೀರ್ವಾದವನ್ನಾಗಿಸಬಾರದೋ' ಎಂದು ಕೇಳುತ್ತಾನೆ.

**ಯುವರಾಜ:** ಅದರ ನ್ಯಾಯವು ನನಗೆ ತಿಳಿಯಲಿಲ್ಲ.

**ಸೂರಣ:** ತಿಳಿಯಲಿಲ್ಲವೇ? ಕೇಳು! ಎಷ್ಟೋ ಜನ ಆಧುನಿಕ ಪುರೋಹಿತರು ಮನ್ತ್ರಗಳ ಅರ್ಥ, ಸ್ವರಗಳ ಜ್ಞಾನವಿಲ್ಲದೆ ಏನನ್ನೋ ಗೊಣಗಿಬಿಟ್ಟು ಅವುದೇ ಕರ್ಮವನ್ನಾದರೂ ಅಯ್ತೆನಿಸುವರಷ್ಟೇ. ಅನ್ತಹ ವಿದ್ಯೆಯಲ್ಲಿಯೇ ಬೆಳೆದ ಅವರ ಮರಿಯಾದ ನನಗೂ ಅದೇ…

ಹೀಗೆ ಪುರೋಹಿತರನ್ನು ಸೂರಣ ಹಾಸ್ಯ ಮಾಡುವುದನ್ನು ಕಾಣುತ್ತೇವೆ. ಸೂರಣನ ತತ್ತ್ವಜ್ಞಾನ ಹೊಟ್ಟೆಗೆ ಸಂಬಂಧಿಸಿದುದು. ಒಂದು ಯಂತದಲ್ಲಿ ಯುವರಾಜ 'ಏಕೆ ಎಂಬ ಪ್ರಶ್ನೆಗೆ ಉತ್ತರ ಕೊನೆಯಲ್ಲಿ ಬಂದು ನಿಲ್ಲುವುದು ಭಗವನ್ತನಲ್ಲಿ' ಎಂದರೆ, 'ಅಲ್ಲ, ಅದು ಹೊಟ್ಟೆಗೆ ಬಂದು ನಿಲ್ಲುತ್ತದೆ' ಎನ್ನುತ್ತಾನೆ, ಸೂರಣ. ಪ್ರಶ್ನೆ ಪ್ರಾರಂಭವಾಗುತ್ತದೆ;

**ಯು:** (ಎಲ್ಲ ದೆಸೆಗಳಲ್ಲಿಯೂ ಆರಯ್ದು) ಅನ್ತರಿಕ್ಷವೇಕೆ?

**ಸೂ:** ವಾಯುಸಂಚಾರಕ್ಕೆ.

**ಯು:** ವಾಯು ಸಂಚಾರವೇತಕ್ಕೆ?

**ಸೂ:** ಮೋಡಗಳು ತೇಲ್ಬುದಕ್ಕೋಸ್ಕರವಾಗಿ

**ಯು:** ಮುಗಿಲ್ಗಳೇಕೆ?

**ಸೂ:** ಮಳೆಗರೆಯುವುದಕ್ಕೆ. ಸರಿಯೊ?

**ಯು:** ಸರಿ, ಮಳೆಯೇತಕ್ಕೆ?

**ಸೂ:** ಮಳೆಯಿಂದ ನೀರು

**ಯು:** ನೀರೋ?

**ಸೂ:** ಕೆರೆ ಕುಣ್ಟೆ ನದಿ ಮೊದಲಾದವು ತುಂಬಲೆಂದು

**ಯು:** ಅವುಗಳೇತಕ್ಕೆ?

**ಸೂ:** ಕೆರೆ ಕುಣ್ಟೆನದಿ ಮೊದಲಾದವು ಗದ್ದೆಗಳಿಗೆ ನೀರೂಡುವುದಕ್ಕೆ. ಒಪ್ಪಿತೋ

**ಯು:** ಹು. ಗದ್ದೆಗಳೇತಕ್ಕೋಸ್ಕರವಾಗಿ?

**ಸೂ:** ಅಲ್ಲಿ ನೆಲ್ಲನ್ನು ಬೆಳೆಯುವರು. ತಪ್ಪಿಲ್ಲವಷ್ಟೆ?

**ಯು:** ಭತ್ತದಿಂದೇನು ಪ್ರಯೋಜನ?

**ಸೂ:** ಭತ್ತವನ್ನು ಕುಟ್ಟಿ, ಕೇರಿ, ಜಲಡೆ ಹಿಡಿದು, ತೊಳಸಿ ಅಕ್ಕಿ ಮಾಡಿಕೊಂಡು, ಅಚ್ಚುಕಟ್ಟಾಗಿ ಅಡುಗೆ ಮಾಡುವುದಕ್ಕೆ. ಸಮ್ಮತ ವೋ?

**ಯು:** ಅಡುಗೆಯೇಕೆ?

**ಸೂ:** (ಕಣ್ಣುಗಳನ್ನು ತಿರುಗಿಸಿ) ಅಡುಗೆಯೇಕೆ? ನಿನಗೆ ಮಂಗಳವಾಗಲಿ. ಯುವರಾಜನೆ! ಆಡುವುದು ಮೂಗಿನವರೆಗೆ ಊಟ ಮಾಡುವುದಕ್ಕೆ

**ಯು:** ಊಟ!

**ಸೂ:** (ಧೀರ್ಘನಿಶ್ವಾಸವನ್ನೂದಿ) ಶಿವ ಶಂಕರಾ ರಕ್ಷಿಸು! ಊಟವು ಹೊಟ್ಟೆ ತುಂಬುವುದಕ್ಕೆ

**ಯು:** ಹೊಟ್ಟೆಯೇತಕ್ಕೆ?

**ಸೂ:** ಹ್ರಾಂ. ಜಠರಾಯನಮಃ ಹ್ರೀಂ ಅನ್ನಂ ಸ್ವಾಹಾ.

**ಯು:** ಅನ್ನವೇಕೆ?

**ಸೂ:** (ಬೇಗ ಬೇಗನೆ) ಹೊಟ್ಟೆಯು ಅನ್ನಕ್ಕೆ; ಅನ್ನವು ಹೊಟ್ಟೆಗೆ ಹೊಟ್ಟೆಯು ಅನ್ನಕ್ಕೆ; ಅನ್ನವು ಹೊಟ್ಟೆಗೆ…. ಹಾ…. ಆ…. ಆ….. ಆ… (ಹಾಡುವನು)

ಹೀಗೆ ಸೂರಣ ತನ್ನ ತತ್ವಜ್ಞಾನದಲ್ಲಿ ಈ ಹೊಟ್ಟೆಯ ತತ್ವವನ್ನು 'ಕಿಂ ಪರಂಪರೆ' ಎಂದು ಕರೆಯುತ್ತಾನೆ. ಮಾಟ, ಬೋಡ, ಮಿನುಕ ಇವರ ನಡುವ ನಡೆಯುವ ಸಂಭಾಷಣೆಯಲ್ಲಿಯೂ ಹಾಸ್ಯವಿಡಂಬನೆಗಳು ಕಂಡುಬರುತ್ತವೆ. ಇಂಥ ಸ್ವಾರಸ್ಯಕರವಾದ ಹಲವು ಸನ್ನಿವೇಶಗಳನ್ನು ಸಂಸರು ತಮ್ಮ ನಾಟಕಗಳಲ್ಲಿ ಅಳವಡಿಸಿರುತ್ತಾರೆ. ವೀರದಂತೆ ಶೃಂಗಾರರಸಕ್ಕೂ ಅಲ್ಲಲ್ಲಿ ಎಡೆ ದೊರೆತಿದೆ. 'ಸುಗುಣ' ಗಂಭೀರ ನಾಟಕದಲ್ಲಿ ಕರುಣಾರಸವು ಅಡಗಿರುವುದನ್ನು ಗಮನಸಿಬಹುದು.

## ೩.೩ ಇತಿಮಿತಿ:

'ಐತಿಹಾಸಿಕ ವಸ್ತುವಿಗೆ ತಕ್ಕ ಘನತೆ ಮತ್ತು ಕಲಾತ್ಮಕತೆಯನ್ನು ಒದಗಿಸಿಕೊಟ್ಟ ಮೊದಲ ನಾಟಕಕಾರರೆಂದು ಸಂಸರನ್ನು ಸ್ಮರಸಿಬೇಕಾಗುತ್ತದೆ.' ಎಂದು ಕೆ. ಮರುಳಸಿದ್ದಪ್ಪನವರು ಅಭಿಪ್ರಾಯಪಟ್ಟಿದ್ದಾಶರೆ. ಗೋವಿಂದ ಪೈಯವರು 'ವಿಗಡವಿಕ್ರಮರಾಯ' ದಲ್ಲಿಯ ಮಹಾರಾಜನ ಮರಣಸನ್ನಿವೇಶವನ್ನೂ ಆ ಸಂದರ್ಭದಲ್ಲಿ ಶೋಕಿಸದ ರಾಜಮಾತೆಯ ನಡವಳಿಕೆಯನ್ನು ಅಸಹಜವೆಂದು ಬಗೆದಿದ್ದಾರೆ. ಆದರೆ ಒಟ್ಟಾರೆ ನಾಟಕವನ್ನೂ, ಸಂಸರ ಪ್ರತಿಭೆಯನ್ನೂ ಮೆಚ್ಚಿಕೊಂಡಿದ್ದಾರೆ. ರಣಧೀರನನ್ನು ಆದರ್ಶರಾಜನನ್ನಾಗಿ ಚಿತ್ರಿಸುವ ಹವಣಿಕೆಯಲ್ಲಿ ಸಂಸರು ಕೆಲವು ಪಾತ್ರ ಹಾಗೂ ಸನ್ನಿವೇಶಗಳನ್ನು ಗೌಣಗೊಳಿಸಿದಂತಿದೆ. 'ಬೆಟ್ಟದ ಅರಸು' ವಿನಲ್ಲಿ ಬೆಟ್ಟದ ಅರಸುವಿನ

ಪಾತ್ರಕ್ಕೆ ಇನ್ನಷ್ಟು ಲಕ್ಷ್ಯ ಕೊಟ್ಟಿದ್ದರೆ, ದುರಂತ ಚಿತ್ರಣ ಇನ್ನಷ್ಟು ಸ್ಫುಟವಾಗಿ ಮೂಡಿಬರಲು ಸಾಧ್ಯವಿತ್ತು. ಅದರಂತೆ 'ವಿಗಡವಿಕ್ರಮರಾಯ'ದಲ್ಲಿ ಕೇಂದ್ರ ಪಾತ್ರವಾದ ವಿಕ್ರಮರಾಯನ ಪಾತ್ರ ಸ್ವರೂಪ ಕೇವಲ ಖಳನಾಯಕನದಾಗಿದೆ. ಇತರ ನಾಟಕಗಳಲ್ಲಿ ಪ್ರಸ್ತಾಪಿಸಿದ ಅವನಲ್ಲಿಯ ಕೆಲವು ಮಾನವೀಯ ಅಂಶಗಳನ್ನು ಈ ನಾಟಕದ ಅವನ ಪಾತ್ರದಲ್ಲಿಯೂ ತರುವ ಪ್ರಯತ್ನ ಮಾಡಿದ್ದರೆ, ಅದೊಂದು ದುರಂತ ಪಾತ್ರವಾಗಿ ಮೂಡಿಬರುವ ಸಾಧ್ಯತೆ ಇತ್ತು. ಸಂಸರ ಕೆಲವು ಪಾತ್ರಗಳು ವಿಪರೀತ ಮಾತನಾಡುತ್ತವೆ. ಪುಟಗಟ್ಟಲೆಯ ಮಾತುಗಳು ಅನವಶ್ಯವೆನಿಸುತ್ತವೆ. ಉದಾ: 'ಮಂತ್ರಶಕ್ತಿ'ಯಲ್ಲಿ ದೊಡ್ಡಮ್ಮ ರಣಧೀರನ ಸೌಂದರ್ಯವನ್ನು ವರ್ಣಿಸುವಾಗ ಅದು, ಎಂಟು ಪುಟಗಳಷ್ಟು ದೀರ್ಘ ಹರಿದಿದೆ. ಇಷ್ಟು ಮಾತನಾಡುವ ತನಕ ಪ್ರೇಕ್ಷಕರನ್ನು ಹೇಗೆ ಹಿಡಿದಿಟ್ಟುಕೊಳ್ಳಬೇಕೆಂಬುದು ದೊಡ್ಡಸಮಸ್ಯೆ, ಭಾಷೆಯೂ, ಕೆಲವಡೆ ಕ್ಲಿಷ್ಟವಾಗಿದ್ದು, ಸಂವಹನಕ್ಕೆ ತೊಂದರೆಯನ್ನುಂಟು ಮಾಡುವಂತಿದೆ. ಸಂಸರು ಕಂಸಿನಲ್ಲಿ ನೀಡುವ ಪ್ರಯೋಗ ಸೂಚನೆಗಳು ಅಪಾರವಾಗಿದ್ದು, ಕೆಲವೊಮ್ಮೆ ಸಂಭಾಷಣೆಗಿಂತ ಅವುಗಳ ಪ್ರಮಾಣವೇ ಹೆಚ್ಚಾಯಿತೇನೋ ಅನ್ನಿಸುತ್ತದೆ. ಕೆ. ಮರುಳಸಿದ್ದಪ್ಪನವರು ಗುರುತಿಸಿರುವಂತೆ ಸಂಸರು ರಾಜ-ಮಹಾರಾಜರಿಂದ ಹಿಡಿದು ಕಾವಲುಗಾರರು, ಹಳ್ಳಿಯವರ ತನಕ ಪಾತ್ರಗಳನ್ನು ತಮ್ಮ ಕೃತಿಗಳಲ್ಲಿ ತಂದಿದ್ದರೂ ಮೇಲ್ವರ್ಗದ ಪಾತ್ರಗಳಿಗೇ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ, ನಿಜ. ಹೀಗೆ ಕೆಲವು ಕೊರತೆಗಳನ್ನು ಸಂಸರ ಕೃತಿಗಳಲ್ಲಿ ನಾವು ಗುರುತಿಸಬಹುದಾದರೂ ಅವುಗಳಿಂದ ನಾಟಕದ ಉಜ್ವಲತೆಗೆ ಕುಂದು ಬಂದಿಲ್ಲ ಎಂಬುದನ್ನೂ ಗಮನಿಸಬೇಕು.

## ೪. ಉಪಸಂಹಾರ

ಸಂಸ ವೈಯಕ್ತಿಕವಾಗಿಯೂ ಒಂಟಿ, ಸಾಹಿತ್ಯ ಪರಂಪರೆಯಲ್ಲಿಯೂ ಒಂಟಿ. ಅನೇಕರನ್ನು ಅನೇಕ ರೀತಿ ಕಾಡಿರುವ, ಇನ್ನೂ ಕಾಡುತ್ತಿರುವ ವ್ಯಕ್ತಿ. ಅವರ ಜೀವನವನ್ನಾಧರಿಸಿ, ಕೃತಿಯನ್ನಾಧರಿಸಿ, ಕನ್ನಡದಲ್ಲಿ ಕೆಲವು ಕೃತಿಗಳು ಹುಟ್ಟಿಕೊಂಡಿವೆ. ಕಿ. ರಂ. ನಾಗರಾಜರ 'ನೀಗಿಕೊಂಡ ಸಂಸ', ಪಿ. ಲಂಕೇಶರ 'ಪೋಲೀಸರಿದ್ದಾರೆ ಎಚ್ಚರಿಕೆ' ಮುಂತಾದವನ್ನು ಇಲ್ಲಿ ಹೆಸರಿಸಬಹುದು. 'ವಿಗಡವಿಕ್ರಮರಾಯ' ನಾಟಕದ ಸ್ಫೂರ್ತಿಯಿಂದ ಕೆ.ವಿ. ನಾರಾಯಣರು 'ಹುತ್ತವಬಡಿದರೆ' ಎಂಬ ನಾಟಕವನ್ನು ರಚಿಸಿದ್ದಾರೆ. ಹೀಗೆ ಸಂಸ, ತಮ್ಮ ಜೀವನ ಹಾಗೂ ಸಾಹಿತ್ಯಗಳ ಮೂಲಕ ಕುತೂಹಲವನ್ನು ಇಂದಿಗೂ ಹುಟ್ಟಿಸುತ್ತಲೇ ಇರುವ ನಾಟಕಕಾರರಾಗಿದ್ದಾರೆ.

## ಬಿರುದಂತೆಂಬರ ಗಂಡ

ಇದು ಒಂದು ಏಕಾಂಕ ನಾಟಕ. ಕಡಲೆಯ ನಂಜಸೆಟ್ಟಿ ಎಂಬ ಮೈಸೂರಿನ ವ್ಯಾಪಾರಿಯೊಬ್ಬನು ಇಮ್ಮಡಿ ತಿಮ್ಮರಾಜ ಒಡೆಯರಿಗೆ 'ಬಿರುದಂತೆಂಬರ ಗಂಡ' ನೆಂಬ ಬಿರುದನ್ನು ಸಾಧಿಸಿಕೊಟ್ಟ ರಾಜಭಕ್ತಿಯ ವೀರಚರ್ಯೆ ಈ ನಾಟಕದಲ್ಲಿದೆ. ತಾವು ಅಂತು, ತಾವು ಇಂತು ಎಂದು ಹೊಗಳಿಸಿಕೊಳ್ಳುವ ಪಾಳೆಯಗಾರರ ಎದುರಿಗೆ ಧೀರನೂ ಶೂರನೂ ಸ್ವದೇಶವತ್ಸಲನೂ ರಾಜಭಕ್ತನೂ ಆದ ನಂಜಸೆಟ್ಟಿ, ತಮ್ಮ ರಾಜರು ಈ ಎಲ್ಲ ಬಿರುದುಗಳನ್ನು ಮೀರಿದವರು ಎಂಬ ಅರ್ಥದಲ್ಲಿ ಮೈಸೂರಿನ ರಾಜರು 'ಬಿರುದಂತೆಂಬರ ಗಂಡ' ಎಂದು ಉದ್ಘೋಷಿಸುತ್ತಾನೆ. ಇದರಿಂದ ಕ್ರುದ್ಧರಾದ ಪಾಳೆಯಗಾರರು ನಂಜಸೆಟ್ಟಿಯೊಂದಿಗೆ ಯುದ್ಧಕ್ಕೆ ಬರುತ್ತಾರೆ. ಅವನು ಅವರೆಲ್ಲರೊಂದಿಗೆ ಹೋರಾಡಿ ಜಯಗಳಿಸಿ ಮೈಸೂರಿನ ಕೀರ್ತಿಯನ್ನು ಕಾಪಾಡುತ್ತಾನೆ. ಅದೇ ವೇಳೆಯಲ್ಲಿ ತಮ್ಮ ಬಿರುದುಗಳನ್ನು ಹೊಗಳಿಸಿಕೊಂಡು ಅಲ್ಲಿಗೆ ಬಂದ ಉಮ್ಮತ್ತೂರಿನ ಪಾಳೆಯಗಾತಿಯ ಎದುರಿಗೆ ಅರಸರ ಬಿರುದುಗಳನ್ನು ಹೊಗಳುತ್ತಾನೆ. ಬಿರುದುಗಳನ್ನು ಕೇಳಿ ಅವಳು ಕೆರಳತ್ತಾಳೆ. ದೊರೆ ಪೇಚಿಗೆ ಸಿಲುಕುವಂತಾಗುತ್ತದೆ. ಆದರೂ ನಂಜಸೆಟ್ಟಿಯಿಂದ ಕ್ಷಮಾಪಣೆ ಕೇಳಿಸುತ್ತಾನೆ. ಹೀಗೆ ತಮ್ಮ ಉದಾತ್ತವರ್ತನೆಯಿಂದ ಆ ಪಾಳೆಯಗಾತಿಯನ್ನು ಗೆದ್ದು ವೀರೋಚಿತವಾದ ವರ್ತನೆಯಿಂದ ಆಕೆಯ ಗಂಡನನ್ನು ಸೋಲಿಸಿ ತಮ್ಮ ಬಿರುದನ್ನು ಉಳಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ, ನಂಜಸೆಟ್ಟಿಯ ಮುದ್ದಿನ ಹೆಸರಾದ ಅಪ್ಪಣ್ಣ ಎಂಬುದನ್ನು ತಮ್ಮ ಸ್ವಂತ ಬಿರುದನ್ನಾಗಿ ಹೊಂದಿ ಅಂದಿನಿಂದ 'ಅಪ್ಪಣ್ಣತಿಮ್ಮರಾಜ ಒಡೆಯ'ರಾಗುತ್ತಾರೆ. ನಂಜಸೆಟ್ಟಿಯ ರಾಜಭಕ್ತಿ ಅಭಿಮಾನಗಳೇ ಈ ನಾಟಕದ ತುಂಬ ವ್ಯಕ್ತವಾಗಿವೆ. ಉಮ್ಮತ್ತೂರಿನ ಪಾಳೆಯಗಾತಿ

ಮಾದೇವಮ್ಮಣ್ಣಿಯ ಸ್ವಾಭಿಮಾನವೂ ಅಷ್ಟೇ ಉಜ್ವಲವಾಗಿ ಪ್ರಕಟವಾಗಿದೆ. ನಂಜಸೆಟ್ಟಿ ಅವಳಲ್ಲಿ ಕ್ಷಮಾಯಾಚನೆ ಮಾಡುವ ಪ್ರಸಂಗವು ಮೈಸೂರು ಅರಸರು ಸ್ತ್ರೀ ಸಮಾಜಕ್ಕೆ ಸಲ್ಲಿಸಿದ ಗೌರವವನ್ನು ಅವರ ಸಂಸ್ಕೃತಿಯನ್ನು ಬಿಂಬಿಸುವ ಪ್ರಸಂಗವಾಗಿದೆ.

## ಸುಗುಣಗಂಭೀರ

ತೊರೆಮಾವಿನ ಹಳ್ಳಿಯ ದುರ್ಗೇಶ್ವರನ ಮಗನು ಪರಪತ್ನಿಯನ್ನು ಕಾಮಿಸಿ ಆಕೆಯ ಪತಿಯನ್ನು ಕೊಲೆ ಮಾಡುತ್ತಾನೆ. ಅದರ ಪರಿಣಾಮವಾಗಿ ಯುವರಾಜನೊಂದಿಗಿನ ಆತನ ತಂಗಿಯ ಪ್ರೇಮ ಜೀವನ ಭಗ್ನವಾದದ್ದು, ಅಲ್ಲದೇ ತೊರೆಮಾವಿನ ಹಳ್ಳಿಯವರನ್ನು ಮೈಸೂರು ಅರಸರು ಸೋಲಿಸಿ ಅವರಿಂದ 'ಸುಗುಣ ಗಂಭೀರ' ಎಂಬ ಬಿರುದನ್ನು ಸಂಪಾದಿಸಿಕೊಂಡದ್ದು ಈ ನಾಟಕದ ವಸ್ತು.

ತೊರೆಮಾವಿನ ಹಳ್ಳಿಯ ಶ್ರೀಮದ್ರೇಟಿ ವೆಂಕಟನಾಯಕನು ತನ್ನ ಮಗಳು ಅಂಬಿಕೆಯನ್ನು ಮೈಸೂರು ಯುವರಾಜನಿಗೆ ಮದುವೆ ಮಾಡಿಕೊಡುವ ಪ್ರಸ್ತಾಪಕ್ಕಾಗಿ ಮಹಾರಾಜನ ಸನ್ನಿಧಾನಕ್ಕೆ ಮಂಗಲದ್ರವ್ಯಗಳೊಂದಿಗೆ ಬರುತ್ತಾನೆ. ಆ ಸಂದರ್ಭದಲ್ಲಿ ವೃದ್ಧಮಂತ್ರಿ ರೇಮಟಿ ವೆಂಕಟರಾಯನ ವಂಶ, ಗುಪ್ತ ನರಹತ್ಯೆಗಳಿಂದ ಕಲಂಕಿತವಾಗಿರುವದನ್ನು ಅರುಹಿ, ಶ್ರೀ ಮದಾನಂದ ಸನ್ಯಾಸಿಯು ಅದನ್ನು ದೃಢಪಡಿಸುತ್ತಾನೆ. ಇದರಿಂದ ಮದುವೆಯ ಸಂಬಂಧ ಮುರಿದು ಬೀಳುತ್ತದೆ. ಅಂಬಿಕೆಯನ್ನು ಗಾಢವಾಗಿ ಪ್ರೀತಿಸಿದ್ದ ಬೆಟ್ಟದ ಚಾಮರಾಜ ಶೋಕಿಸುತ್ತಾನೆ. ಈ ಮಧ್ಯೆ, ಮೈಸೂರಿನಲ್ಲಿ ವಿದ್ಯೆ ಕಲಿಯಲು ಬಂದ ಭಾಮನಾಯಕನ ತಮ್ಮ ಚಂದ್ರಮ, ಅರಸರೊಂದಿಗೆ ದುರ್ಗಾಷ್ಟಮಿಯ ದಿನ ಬೆಟ್ಟವೇರುವಾಗ ಸಿಡಿಲು ಬಿದ್ದು ಸಾಯುತ್ತಾನೆ. ಕ್ರುದ್ಧಗೊಂಡ ತೊರೆ ಮಾವಿನ ಹಳ್ಳಿಯವರು ಮೈಸೂರು ಅರಸರ ವಿರುದ್ಧ ಯುದ್ಧ ಸಾರುತ್ತಾರೆ. ತೇಜಸ್ವಿನಿ ತನ್ನ ಗಂಡನ ಕೊಲೆಯ ಪ್ರತೀಕಾರಕ್ಕಾಗಿ ಯುದ್ಧವನ್ನು ಹೊತ್ತಿಸಿದ್ದರೂ ಭಾಮನಾಯಕನ ಪಶ್ಚಾತ್ತಾಪದಿಂದಾಗಿ, ಯುದ್ಧನಿಂತರೆ ಸಾಕೆನ್ನುವ ಮಟ್ಟಕ್ಕೆ ಬರುತ್ತಾಳೆ. ಅಂಬಿಕೆಯು ವೇಷ ಮರೆಯಿಸಿಕೊಂಡಾದರೂ ಹೋಗಿ ಯುದ್ಧನಿಲ್ಲಿಸಲು ಪ್ರಯತ್ನಿಸುತ್ತಾಳೆ. ಅದು ಕೈಗೂಡುವುದಿಲ್ಲ. ಕೊನೆಗೆ ಅಣ್ಣನ ಯುದ್ಧ ನೋಡಲು ರಣಭೂಮಿಗೆ ಹೋಗಿ, ಗಾಯಗಳಾಗಿ ರಕ್ತ ಸೋರಿ, ಅಲ್ಲಿಯೇ ಕೊನೆಯುಸಿರೆಳೆಯುತ್ತಾಳೆ. ಭಾಮನಾಯಕನೂ ಯುವರಾಜನೊಂದಿಗಿನ ಯುದ್ದದಲ್ಲಿ ಸೋತು ಸಾಯುತ್ತಾನೆ. ಕೊನೆಯಲ್ಲಿ ಮೈಸೂರಿಗೇ ಜಯವಾಗುತ್ತದೆ. ತೊರೆಮಾವಿನ ಹಳ್ಳಿಯವರ 'ಸುಗುಣಗಂಭೀರ' ಬಿರುದು ಮೈಸೂರು ಅರಸರದಾಗುತ್ತದೆ.

ಯುದ್ಧ, ಪ್ರೇಮ ಮುಂತಾದ ಅನೇಕ ಸ್ವಾರಸ್ಯಕರ ಅಂಶಗಳನ್ನು ಒಳಗೊಂಡ ೧೬ ಪ್ರವೇಶಗಳ ನಾಟಕವಿದು. ಅಂಬಿಕೆಯ ಪ್ರೇಮ, ತೇಜಸ್ವಿನಿಯ ಮಾನಸಿಕ ದ್ವಂದ್ವ ಇವೆಲ್ಲ ಬಹಳ ಸಮರ್ಥವಾಗಿ ನಾಟಕದಲ್ಲಿ ಮೂಡಿಬಂದಿವೆ. ಈ ನಾಟಕದ ಮೇಲೆ ಷೇಕ್ಸಪಿಯರ್ ನ ಪ್ರಭಾವ ಗಾಢವಾಗಿ ಆದಂತೆ ತೋರುತ್ತದೆ. ಸಂಸರ ಹಾಸ್ಯಪ್ರಜ್ಞೆ, ಸಂಭಾಷಣೆಯಲ್ಲಿ ದೇಸಿ ಮುಂತಾದವುಗಳು ಈ ಕೃತಿಯಲ್ಲಿ ವಿಶೇಷವಾಗಿ ಗಮನಿಸುವಂತಿವೆ.

## ಬೆಟ್ಟದ ಹರಸು

ಚಾಮರಾಜ ಒಡೆಯರ ವಿಲಾಸ ಜೀವನ, ಬೆಟ್ಟದ ಅರಸುವಿನ ಅಸಹಾಯಕತೆ, ರಣಧೀರ ಕಂಠೀರವನ ರಾಜತೇಜಸ್ಸು, ಉದಾತ್ತಗುಣ, ವಿಕ್ರಮರಾಯನ ರಾಜವಿದ್ರೋಹಿ ಚಟುವಟಿಕೆ, ಹಳೆಪೈಕದವರ ಧೂರ್ತತೆ ತಿಮ್ಮಾಜಮ್ಮಣ್ಣಿ ಮುದ್ದಾಜಮ್ಮಣ್ಣಿಯವರ ಕೊರಗು ಮುಂತಾದ ಅಂಶಗಳು ಈ ನಾಟಕದಲ್ಲಿ ಮಹತ್ವವನ್ನು ಪಡೆದುಕೊಳ್ಳುತ್ತವೆ. ಚಾಮರಾಜ ಒಡೆಯರು ವಿಲಾಸಜೀವನದಲ್ಲಿ ತಲ್ಲೀನರಾಗಿರುವಂತೆ ಮಾಡಿ ರಾಜ್ಯದ ಆಡಳಿತ ಸೂತ್ರವನ್ನು ತಮ್ಮ ಅಂಕೆಯಲ್ಲಿಟ್ಟುಕೊಂಡು ಇಚ್ಛೆಬಂದಂತೆ ಕಾರುಬಾರು ಮಾಡುತ್ತಿದ್ದ ಹಳೆಪೈಕದವರನ್ನು ನಿಯಂತ್ರಿಸುವ ಸಲುವಾಗಿ ಬಂಗಾರದವಳ ಮಗ ಬೆಟ್ಟದ ಅರಸರನ್ನು ದಳವಾಯಿ ಮಾಡುತ್ತಾರೆ. ರಣಧೀರ ಮತ್ತು ವಿಕ್ರಮರಾಯ ತೆರಕಣಾಂಬಿಯಿಂದ ಮೈಸೂರಿಗೆ ಬರುತ್ತಾರೆ. ರಣಧೀರ ಅರಮನೆಯ ವಿದ್ಯಮಾನಗಳನ್ನರಿತು ಅದನ್ನು ಸುಧಾರಿಸುವಲ್ಲಿ ಪ್ರಯತ್ನಿಸುತ್ತಾನೆ. ಆದರೆ ವಿಕ್ರಮರಾಯ ಅರಮನೆಯ ಅವ್ಯವಸ್ಥೆಯ ಲಾಭ ಪಡೆದು ಅದನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾನೆ. ಹಳೆಪೈಕದವರನ್ನೂ ಬನ್ನೂರು

ಲಿಂಗಣ್ಣನನ್ನೂ ಒಳಗುಮಾಡಿಕೊಂಡು ರಾಜವಿದ್ರೋಹದ ಕೆಲಸಗಳನ್ನು ಮಾಡುತ್ತ ಎಲ್ಲವನ್ನೂ ತನ್ನ ಅಂಕೆಯೊಳಗೇ ತಂದುಕೊಳ್ಳುತ್ತಾನೆ. ಹೀಗೆ ಪ್ರಬಲವಾಗುತ್ತಾ ಬಂದು ಬೆಟ್ಟದ-ಅರಸುವಿನ ಮೇಲೆ ಅಪವಾದ ತಂದು, ಅವನನ್ನು ಸೆರೆಹಿಡಿಸಿ ಆತನ ಕಣ್ಣಿಗೆ ಭಾಂಡ ಕರ್ಪೂರವನ್ನು ಕಟ್ಟಿಸುತ್ತಾನೆ. ತನಗೆ ಬೇಕಾದ ಲಿಂಗಣ್ಣನನ್ನು ದಳವಾಯಿಯನ್ನಾಗಿ ಮಾಡುತ್ತಾನೆ. ಹೀಗೆ ವಿಕ್ರಮರಾಯ ಮೈಸೂರಿನ ರಾಜಕೀಯದಲ್ಲಿ ಪ್ರವೇಶಿಸಿ ಪ್ರಬಲನಾಗುತ್ತ ಬಂದುದನ್ನು ಈ ನಾಟಕ ಚಿತ್ರಿಸುತ್ತದೆ. ರಣಧೀರ ರಾಜಯೋಗ್ಯ ವ್ಯಕ್ತಿ ಎಂಬುದನ್ನೂ ಈ ನಾಟಕ ಬಿಂಬಿಸುತ್ತದೆ. ನಾಟಕದ ವಸ್ತು ವಿಸ್ತಾರವಾದುದು. ಇದರಲ್ಲಿ ೧೪ ಪ್ರವೇಶಗಳಿದ್ದು, ಪ್ರತಿಯೊಂದು ಪ್ರವೇಶವೂ ಸ್ವತಂತ್ರ ಘಟಕದಂತಿದೆ. ತಂತ್ರ ಪ್ರತಿತಂತ್ರಗಳ ವೀರ್ಯವತ್ತಾದ ಸನ್ನಿವೇಶಗಳು ನಾಟಕದ ತುಂಬೆಲ್ಲ ಹರಡಿವೆ. ಬೆಟ್ಟದರಸು, ರಣಧೀರ, ವಿಕ್ರಮರಾಯ ಮೂವರೂ ಬೆಟ್ಟದ ಚಾಮರಾಜ ಒಡೆಯನ ಮಕ್ಕಳೇ ಆಗಿದ್ದರೂ ಕೂಡ ಅವರ ಗುಣ-ವ್ಯಕ್ತಿತ್ವಗಳು ಹೇಗೆ ಭಿನ್ನವಾಗಿದ್ದವೆಂದು ಈ ನಾಟಕ ಅರ್ಥಪೂರ್ಣವಾಗಿ ಚಿತ್ರಿಸುತ್ತದೆ. ಮಹಾರಾಣಿಯರು, ವೇಶ್ಯೆಯರು, ಅರಮನೆಯ ವಿಲಾಸಿನಿಯರು ಮುಂತಾದ ಸ್ತ್ರೀಪಾತ್ರಗಳೂ ಇದ್ದು, ಅವರು ಮಾಡುವ ಕೈವಾಡಗಳು, ನಡೆಸುವ ಒಳಸಂಚುಗಳು, ಮೈಸೂರಿನ ರಾಜಕೀಯದಲ್ಲಿ ಮಹತ್ವ ಪಡೆದುಕೊಳ್ಳುತ್ತವೆ.

## ವಿಜಯನಾರಸಿಂಹ

ಇದು ರಣಧೀರನನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿದ ಅವನ ಉತ್ಸಾಹಶಕ್ತಿಯ ಕತೆ. ಮೊದಲಿನ ಏಳು ದೃಶ್ಯಗಳಲ್ಲಿ ರಣಧೀರನ ಸುಳಿವಿಲ್ಲದಿದ್ದರೂ ಅನೇಕ ಶಕ್ತಿಗಳು ಒಂದು ಗೂಡಿ ಅವನನ್ನು ಮುಗಿಸಲು ಸಜ್ಜಾಗುವುದನ್ನು ಕಾಣುತ್ತೇವೆ. ರಣಧೀರನ ಹೊಸ ಆಡಳಿತ ವ್ಯವಸ್ಥೆಯಿಂದ ಅಸಮಾಧಾನಗೊಂಡ ಮನ್ನಮರಾಜಗೌಡ, ತಿರುಚನಾಪಳ್ಳಿಯ ಅರಸ ರಣಧೀರನಿಂದ ತನಗಾದ ಅವಮಾನದ ಸೇಡನ್ನು ತೀರಿಸಿಕೊಳ್ಳಲು ಕಳಿಸಿದ ಕರುವಿಯನ್‌ಹಾಗೂ ಆತನ ಜಟ್ಟಿಗಳು ತನ್ನ ಅಣ್ಣ ವೀರಮಲ್ಲನನ್ನು ಕೊಂದ ಹಗೆಯನ್ನು ತೀರಿಸಿಕೊಳ್ಳಲು ಸಮಯಕಾಯುತ್ತಿರುವ ಶೇಂದಲೈಮಲ್ಲ, ರಣಧೀರ ಪ್ರಬಲನಾಗುವುದನ್ನು ತಪ್ಪಿಸಿ ಅವನನ್ನು ಮುಗಿಸಲು ಬಿಜಾಪುರದಿಂದ ಕಳಿಸಲ್ಪಟ್ಟ ಹಮೀದಖಾನ, ಚಂದ್ರಗಿರಿಯಿಂದ ಇದೇ ಕೆಲಸಕ್ಕಾಗಿ ಬಂದಿರುವ ಜೀವನ್ನಪಂತ ಮುಂತಾದವರೆಲ್ಲ ಸೇರಿ ಹೇಗಾದರೂ ರಣಧೀರನನ್ನು ಕೊಲ್ಲಬೇಕೆಂದು ಹೊಂಚು ಹಾಕುತ್ತಿರುತ್ತಾರೆ. ಈ ಬೆಳವಣಿಗೆಗಳ ಜೊತೆಗೆ ವಿಕ್ರಮರಾಯನ ಆಪ್ತರಾದ ತುಂಗರಾಯ ಅಲಗರಾಜ, ರಣಧೀರನನ್ನು ಕೊಂದು ತಮ್ಮ ಸ್ವಾಮಿಭಕ್ತಿಯನ್ನು ಮೆರೆಯಬೇಕೆನ್ನುತ್ತಾರೆ. ಅರಮನೆಯ ಒಳವಿದ್ಯಮಾನಗಳು ಕೂಡ ಶತ್ರುಗಳಿಗೆ ಅನುಕೂಲವಾಗುವಂತೆ ಮಾರ್ಪಡುತ್ತವೆ. ರಣಧೀರನೊಮದಿಗೆ ಗರಡಿಯಲ್ಲಿದ್ದ ಬಸವಮಲ್ಲ ಗುಪ್ತದ್ರೋಹಿಯಾಗಿ ಈಗ ಅವನ ಸಜ್ಜೆವಳನಾಗಿ ವೈರಿಗಳಿಗೆ ಸಹಾಯಕನಾಗುತ್ತಾನೆ. ಈ ಎಲ್ಲ ಬೆಳವಣಿಗೆಗಳೂ ಮೊದಲಿನ ಏಳು ಪ್ರವೇಶಗಳಲ್ಲಿ ನಡೆಯುತ್ತವೆ. ತಂದೆ ಕೂಡಿಟ್ಟ ನಿಕ್ಷೇಪದೊರೆತು ರಣಧೀರ ಕಂಠೀರವ ನಾಣ್ಯವನ್ನು ಟಂಕಿಸಿ ಚಲಾವಣೆಗೆ ತರುತ್ತಾನೆ. ವೈರಿಗಳ ತಂತ್ರಗಳಿಗೆ ಅವನ ಸಂಗಡಿಗರು ಪ್ರತಿತಂತ್ರವನ್ನು ಹೂಡಿ ಅವರ ಯೋಜನೆಯನ್ನು ವಿಫಲಗೊಳಿಸುತ್ತಾರೆ. ಕೊನೆಗೊಮ್ಮೆ ರಣಧೀರನಿಗೂ ಅವನ ವಿರೋಧಿಗಳಿಗೂ ನೇರ ಸಂಘರ್ಷ ಏರ್ಪಡುತ್ತದೆ. ರಹಸ್ಯವಾಗಿ ತನನ್ನು ಕೊಲ್ಲಲು ಬಂದಿದ್ದ ಅವರನ್ನು ರಣಧೀರ ವಿಜಯನಾರಸಿಂಹ ಖಡ್ಗದ ನೆರವಿನಿಂದ ಸಂಹರಿಸುತ್ತಾನೆ. ಹೀಗೆ ವಿಜಯನಾರಸಿಂಹ ನಾಟಕದಲ್ಲಿ ರಣಧೀರ ಏಕಾಂಗ ವೀರತ್ವವನ್ನು ಮೆರೆಯುವ ಅವಕಾಶ ಕಲ್ಪಿಸಲಾಗಿದೆ. ಈ ಘರ್ಷಣೆಯಲ್ಲಿ ಅವನಿಗೇ ಜಯಲಭಿಸಿದ್ದರೂ ಮನ್ನಮಗೌಡ, ನಿರೀಶ ಮೊದಲಾದ ರಾಜಭಕ್ತರನ್ನು ಕಳೆದುಕೊಂಡ ದುಃಖ ಅವನಲ್ಲಡಗಿದೆ. ಜೊತೆಗೆ, ತನ್ನ ಜೊತೆ ಗರಡಿಯಾಳು ಬಸವಮಲ್ಲ ವಿಶ್ವಾಸದ್ರೋಹಿಯಾದುದು ಅವನಿಗೆ ಅಪಾರ ನೋವನ್ನು ತರುತ್ತದೆ.

## ವಿಗಡವಿಕ್ರಮರಾಯ

ಸಂಸರ ನಾಟಕಗಳಲ್ಲಿಯೇ ಹೆಚ್ಚು ಪ್ರಸಿದ್ಧವಾದುದು ಮತ್ತು ಶ್ರೇಷ್ಠವಾದುದು. ಇದರಲ್ಲಿಯೇ ನಾಟಕೀಯ ಅಂಶ ಹೆಚ್ಚಿನ ಪ್ರಮಾಣದಲ್ಲಿ ವ್ಯಕ್ತವಾಗಿದೆ. ಪ್ರತಿನಾಯಕನಾದ ವಿಕ್ರಮರಾಯನೇ ಈ ನಾಟಕದ ಕೇಂದ್ರ ವ್ಯಕ್ತಿ. ರಾಜನನ್ನೂ ಲೆಕ್ಕಿಸದ ನಿರಂಕುಶ ಸರ್ವಾಧಿಕಾರಿಯಾಗಿ ಅವನು ಚಿತ್ರಿತನಾಗಿದ್ದಾನೆ. ತನಗೆ ವಿರೋಧಿಯಾದ ಇಮ್ಮಡಿ ರಾಜ ಒಡೆಯನನ್ನು ಪಂಡಿತ ಬೊಮ್ಮರಸನ ಸಹಾಯದಿಂದ ಕೊಲ್ಲಿಸಿದ

ವಿಕ್ರಮರಾಯ, ರಾಜ ಚಿಹ್ನೆಗಳನ್ನೆಲ್ಲ ಕಸಿದುಕೊಂಡು ತಾನೇ ಸರ್ವಾಧಿಕಾರಿಯಾಗಿ ಮೆರೆಯುತ್ತಾನೆ. ರಣಧೀರನನ್ನು ನೆಪಕ್ಕೆ ಮಾತ್ರ ರಾಜಗದ್ದುಗೆಯ ಮೇಲೆ ಕೂರಿಸಿ, ರಾಜ್ಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಳಬೇಕೆಂದು ಆಲೋಚಿಸುತ್ತಾನೆ. ರಣಧೀರನ ಆಪ್ತರಾದ ನಿರೀಶ, ಸಕ್ಕ ಮುಂತಾದವರು ವೇಷ ಮರೆಯಿಸಿಕೊಂಡು ಬಂದು ಗೆಳೆಯನ ರಕ್ಷಣೆ ಮಾಡುತ್ತಾರೆ. ನಿರೀಶ, ವಿಕ್ರಮರಾಯನ ವಿರುದ್ಧ ಪ್ರಜಾಭಿಪ್ರಾಯವನ್ನು ರೂಪಿಸುಲ್ಲಿ ಯಶಸ್ವಿಯಾಗುತ್ತಾನೆ. ತನ್ನ ಬಲೆಯಲ್ಲಿ ಬೀಳದ ರಣಧೀರನನ್ನು ಮುಗಿಸಬೇಕೆಂದು ವಿಕ್ರಮರಾಯ ಆಲೋಚಿಸುತ್ತಾನೆ . ಅಷ್ಟರಲ್ಲಿ ರಾಜಮಾತೆಯ ಪ್ರೋತ್ಸಾಹದಿಂದಾಗಿ ಕಾವಲುಗಾರರಾದ ಚೆನ್ನ, ರಂಗರು ವಿಕ್ರಮರಾಯನನ್ನು ಕೊಲ್ಲಲು ಹೊಂಚು ಹಾಕುತ್ತಾರೆ. ಕತ್ತಲೆಯಲ್ಲಿ ಅವನ ಕಗ್ಗೊಲೆಯಾಗುತ್ತದೆ. ರಣಧೀರ ಮರುದಿನ ಪಟ್ಟವೇರುವ ಪ್ರಸ್ತಾಪದೊಂದಿಗೆ ನಾಟಕ ಮುಗಿಯುತ್ತದೆ. ೧೨ ಪ್ರವೇಶಗಳ ಈ ನಾಟಕ ಬಹಳ ಅಚ್ಚುಕಟ್ಟಾಗಿ ಯೋಜಿಸಲ್ಪಟ್ಟಿದೆ. ಒಂದು ಪ್ರವೇಶದಿಂದ ಮತ್ತೊಂದು ಪ್ರವೇಶಕ್ಕೆ ನಾಟಕದ ಕ್ರಿಯೆ ತ್ವರಿತಗತಿಯಲ್ಲಿ ಸಾಗಿ, ಉದ್ದೇಶಿತ ಗುರಿ ತಲುಪುವಲ್ಲಿ ಯಶಸ್ವಿಯಾಗುತ್ತದೆ. ವಿಕ್ರಮರಾಯನ ಉತ್ಕರ್ಷ ಹಾಗೂ ಪತನ ಎರಡೂ ಸಮರ್ಥವಾಗಿ ಇಲ್ಲಿ ಚಿತ್ರಿತವಾಗಿದೆ. ಅದೇ ರೀತಿ ರಣಧೀರನ ಉದಯವೂ ಇಲ್ಲಿದೆ. ವಿಕ್ರಮನ ಕುತಂತ್ರ ಒಳಸಂಚುಗಳನ್ನು ನಿವಾರಿಸಿ ಮೈಸೂರಿನ ಅರಸೊತ್ತಿಗೆಯನ್ನು ಮುನ್ನಡೆಸಬಲ್ಲ ಸಾಮರ್ಥ್ಯ ಇರುವವನು ರಣಧೀರನೊಬ್ಬನೇ ಎಂಬ ಆಶಯವನ್ನು ಸಂಸರು ಈ ನಾಟಕದಲ್ಲಿ ಸೂಚಿಸುತ್ತಾರೆ.

## ಮಂತ್ರ ಶಕ್ತಿ

ರಣಧೀರನ ಉದಾತ್ತ ವ್ಯಕ್ತಿತ್ವ ಮಂತ್ರಶಕ್ತಿ ನಾಟಕದಲ್ಲಿ ವ್ಯಕ್ತವಾಗಿದೆ. ರಣಧೀರ ನ್ಯಾಯಯುತವಾಗಿ ರಾಜ್ಯವಾಳ ಬಯಸುತ್ತಾನೆಯೇ ಹೊರತು, ಅನ್ಯಾಯದ ರಾಜ್ಯ ಅವನಿಗೆ ಬೇಡ. ಹಳೇ ಪೈಕದವರಿಗೆ ಸಂತೋಷವಾಗುತ್ತದೆಂದು ಆಧಾರಗಳಿಲ್ಲದೇ ಶ್ರೀರಂಗ ರಾಜನನ್ನು ಅಧೀನರಾಜನೆಂಧು ಘೋಷಿಸಲು ಅವನು ತಯಾರಾಗುವುದಿಲ್ಲ. ಅದಕ್ಕಾಗಿ ದಾಖಲೆಗಳನ್ನು ಶೋಧಿಸಲು ಆದೇಶನೀಡುತ್ತಾನೆ. ರಣಧೀರನನ್ನು ಸೆರೆಹಿಡಿಯುವುದಕ್ಕಾಗಿ ಕರುವಿಯನ್‌ಕರೆತಂದಿರುವ ಸುಂದರ ವೇಶ್ಯೆ ದೊಡ್ಡಮ್ಮ, ರಣಧೀರನ ಉದಾತ್ತ ವ್ಯಕ್ತಿತ್ವಕ್ಕೆ ಮಾರುಹೋಗಿ ತಾನೇ ಅವನಿಗೆ ಮನಸೋಲುತ್ತಾಳೆ. ರಣಧೀರನ ಬಾಲ್ಯದ ಒಡನಾಡಿ ಮತ್ತು ದಳವಾಯಿ ನಂಜರಾಜರು ಅವನ ವಿರೋಧಿ ಗುಂಪಿನಲ್ಲಿ ಸೇರಿರುವುದು ಪರಿಸ್ಥಿತಿ ಸಂಕೀರ್ಣಗೊಳ್ಳುತ್ತಿರುವುದರ ದ್ಯೋತಕ. ರಣಧೀರನನ್ನು ತನ್ನ ವಶಮಾಡಿಕೊಳ್ಳದ ದೊಡ್ಡಮ್ಮನ ಮೇಲೆ ಕರುವಿಯನ್‌ಕೋಪದಿಂದ ಕೈಮಾಡತೊಡಗಿದಾಗ, ಮೊನೆಗಾರನ ವೇಷದಲ್ಲಿದ್ದ ರಣಧೀರ ಬಂದು ಅವಳನ್ನು ರಕ್ಷಿಸುತ್ತಾನೆ. ರಣಧೀರನ ಸಮಯೋಚಿತ ವರ್ತನೆಯಿಂದ ಸರ್ವಾಧಿಕಾರಿಯಾಗಬಯಸಿದ ನಂಜರಾಜನೂ ಬಂದಿಯಾಗುತ್ತಾನೆ. ಶ್ರೀರಂಗರಾಯನನ್ನು ಸೆರೆಹಿಡಿದು ಕರುವಿಯನ್‌ಕಡೆಯವರನ್ನು ರಣಧೀರ ಹಠಾತ್ತಾಗಿ ಬಂದು ಸೆರೆ ಹಿಡಿಸುತ್ತಾನೆ. ಇಂಥಲ್ಲೆಲ್ಲ ಅವನ ಬೇಹುಗಾರಿಕೆ. ಸೂಕ್ಷ್ಮಗ್ರಾಹಿತ್ವ ಅಚ್ಚರಿಯನ್ನುಂಟು ಮಾಡುತ್ತದೆ. ಮೊನೆಗಾರನ ವೇಷದಲ್ಲಿ ಓಡಾಡಿಕೊಳ್ಳುತ್ತ ಹಳೆ ಪೈಕದವರ ದ್ರೋಹಿ ರಹಸ್ಯಗಳನ್ನೆಲ್ಲ ತಿಳಿದುಕೊಂಡು ವಿಫಲಗೊಳಿಸುವಲ್ಲಿಯೂ ಅವನ ಕುಶಾಗ್ರಮತಿ ವ್ಯಕ್ತವಾಗಿದೆ. ದೊಡ್ಡಮ್ಮನೊಂದಿಗೆ ಶಯ್ಯಾಗೃಹದಲ್ಲಿದ್ದಾಗ ರಣಧೀರನನ್ನು ಕೊಲ್ಲಬೇಕೆಂದು ಕರುವಿಯನ್‌ಮಾಡಿದ ಸಂಚೂ ವಿಫಲವಾಗಿ ತಾನೇ ಸೆರೆಯಾಗುತ್ತಾನೆ. ಹಳೆ ಪೈಕದವರ ದ್ರೋಹಿ ನಡವಳಿಕೆಯನ್ನು ಸಹಿಸದೇ ಅವರ ಸಭೆಯನ್ನೇ ರಣಧೀರ ವಿಸರ್ಜಿಸಿ ಬಿಡುತ್ತಾನೆ. ದೊಡ್ಡಮ್ಮ ರಣಧೀರನ ಭಂಗಾರದವಳಾಗಿರಲು ಇಷ್ಟಪಟ್ಟು ಅರಮನೆ ಸೇರುತ್ತಾಳೆ. ಶ್ರೀರಂಗಪಟ್ಟಣದ ರಾಜ್ಯ ಯಾರದ್ದೆಂದು ಇತ್ಯರ್ಥವಾಗದೇ ನೆತ್ತದ ಅದೃಷ್ಟ ಪರೀಕ್ಷೆ ನಡೆಯುತ್ತದೆ. ಆಟದಲ್ಲಿ ರಣಧೀರ ಗೆಲ್ಲುತ್ತಾನೆ. ಅಹಂಕಾರದಿಂದ ಬೀಗದೆ ಶ್ರೀರಂಗರಾಯನೊಡನೆ ಅಧಿರಾಜನಂತೆ ನಡೆದುಕೊಂಡು ತನ್ನ ಉದಾತ್ತ ವ್ಯಕ್ತಿತ್ವ ಪ್ರಕಟಪಡಿಸುತ್ತಾನೆ. ಹೀಗೆ 'ಮಂತ್ರಶಕ್ತಿ' ರಣಧೀರನ ಉತ್ಕರ್ಷವನ್ನು ತಂತ್ರಕ್ಕೆ ಪ್ರತಿತಂತ್ರಗೈಯುವ ಅವನ ಸಾಮರ್ಥ್ಯವನನ್ನು ಹಾಗೂ ಅವನ ಕುಶಾಗ್ರ ಮತಿಯನ್ನು ವ್ಯಕ್ತಪಡಿಸುವ ನಾಟಕವಾಗಿದೆ.